# ಅಧ್ಯಯನ 2 Study II

# ನೂತನ ಸೃಷ್ಟಿ

## THE NEW CREATION

**ನೂತನ ಸೃಷ್ಟಿಯು ಇತರ ಸಂಗತಿಗಳಿಂದ ವಿಭಿನ್ನವಾದುದು, ಹಾಗೂ ವೈಶಿಷ್ಟ್ಯಪೂರ್ಣವಾದುದು – ಸುಮಾರಾಗಿ ಬೇರೆಯವುಗಳಿಂದಲ್ಲದೆ ಮಾನವ ಸೃಷ್ಟಿಯಿಂದಲೇ ಆಯ್ದುಕೊಂಡಿದ್ದು ಏಕೆ? – ಇದನ್ನು ಆಯ್ದುಕೊಂಡದ್ದರ ಉದ್ದೇಶ ಇಂದಿನ ಹಾಗೂ ಮುಂದಿನ ಸೇವಾಕಾರ್ಯಗಳು – ಯಾವ ರೀತಿಯಲ್ಲಿ ಪಡೆದುಕೊಂಡಿದ್ದು ಮತ್ತು ನೂತನ ಸ್ವಭಾವಕ್ಕೆ ಜನಿಸಿದ್ದು – ಎಲ್ಲಾ ಸದಸ್ಯರುಗಳೊಂದಿಗೆ, ನಾಯಕ, ಮುಖ್ಯಸ್ಥ ಮತ್ತು ಮದಲಿಂಗನೊಡನೆ ನಿಕಟ ಸಂಬಂಧ – ಸದಸ್ಯತ್ವದ ಬೆಳವಣಿಗೆ ಮತ್ತು ಪರೀಕ್ಷೆ – ಆರನೆಯ ಅಥವಾ ಆಧ್ಯಾತ್ಮಿಕ ಪ್ರಜ್ಞೆ ಆಧ್ಯಾತ್ಮಿಕ ಸಂಗತಿಗಳನ್ನು ಗ್ರಹಿಸುವ ಪ್ರಜ್ಞೆ – ಮುಖ್ಯಸ್ಥನಿಗೆ ನಿಷ್ಠೆಯುಳ್ಳವರಾಗುವಂತೆ ಮತ್ತು ಸಹೋದರರಲ್ಲಿ ಯಾರಿಂದಲೂ ಬದಲಾಗದಂತೆ ನೂತನ ಸೃಷ್ಟಿಯನ್ನು ಯಾವ ಹೆಸರಿನಿಂದ ಕರೆಯಬೇಕು?**

ಸುವಾರ್ತಾ ಯುಗದ ಕ್ರೈಸ್ತ ಸಭೆಯನ್ನು ಸತ್ಯವೇದದಲ್ಲಿ ಪದೇ ಪದೇ ನೂತನ ಸೃಷ್ಟಿಯೆಂದೂ – ಅದರ ಅಂತಿಮ ಸದಸ್ಯರನ್ನು, ಜಯಶಾಲಿಗಳಾಗುವವರನ್ನು, ವಿಶೇಷವಾಗಿ ಯೇಸುಕ್ರಿಸ್ತನಲ್ಲಿ "ನೂತನ ಸೃಷ್ಟಿಗಳು" ಎಂದು ಕರೆಯಲಾಗಿದೆ (2 ಕೊರಿ. 5:17). ಹೀಗಿರುವಾಗ, ದುರದೃಷ್ಟವಶಾತ್, ಪೂರ್ಣ ಸಮರ್ಪಿತ ಕ್ರೈಸ್ತರಲ್ಲಿ ಹಾಗೂ ಇತರರಲ್ಲಿ ದೈವಪ್ರೇರಿತ ವಾಕ್ಯಗಳನ್ನು ಅವ್ಯವಸ್ಥಿತ ಮತ್ತು ಅಸ್ಪಷ್ಟ ರೀತಿಯಲ್ಲಿ ಓದಿಕೊಳ್ಳುವುದು ವಾಡಿಕೆಯಾಗಿದ್ದು ಇದು ಅವುಗಳ ಹೇಳಿಕೆಗಳಿಗೆ ನಿಜವಾದ ಅರ್ಥವನ್ನು ಸೂಚಿಸುತ್ತಿಲ್ಲ. ಇದು ಓದುಗರಿಂದ ಹೆಚ್ಚಿನ ಆಶೀರ್ವಾದ ಮತ್ತು ತಮ್ಮದಾಗಬಹುದಾದ ಆದೇಶಗಳನ್ನು, ಯುಕ್ತವಾದ ಪಥದಲ್ಲಿ ಅವುಗಳನ್ನು ಅನುಸರಿಸುತ್ತಿದ್ದರೆ ದೈವಿಕ ಪ್ರಕಟನೆಗಳನ್ನು ಗ್ರಹಿಸುವ ಇಚ್ಛೆಯುಳ್ಳ ಶಿಷ್ಯತ್ವದ ಚೈತನ್ಯದಲ್ಲಿ ಮುಳುಗಬಹುದಾದ ಸೌಕರ್ಯಗಳನ್ನು ಕಸಿದುಕೊಳ್ಳುವುದಾಗಿದೆ. ದೇವರ ವಾಕ್ಯದ ಸಾಮಾನ್ಯ ಓದುಗರು ಅದರಿಂದ ಕಲಿತುಕೊಳ್ಳಲು ಅಪೇಕ್ಷಿಸುವುದಿಲ್ಲ. ಅವರು ಅದನ್ನು ಔಪಚಾರಿಕವಾಗಿ, ಒಂದು ರೀತಿಯ ಕರ್ತವ್ಯವೋ ಎಂಬಂತೆ ಓದುವುದರಿಂದ ಹೆಚ್ಚಿನ ಮಟ್ಟದ ಕಷ್ಟವು ಕಂಡು ಬರುತ್ತದೆ. ಅವರಿಗೆ ದೈವಿಕ ಯೋಜನೆಗಳ ಬಗ್ಗೆ ಮಾಹಿತಿಯು ಬೇಕಾದಾಗ ಅವರು ವ್ಯಾಖ್ಯಾನಗಳು ಮತ್ತು ಪ್ರಶ್ನೋತ್ತರ ರೂಪದ ಗ್ರಂಥಗಳಿಗೆ ಮರೆಹೋಗುತ್ತಾರೆ. ಇವುಗಳು ಮತ್ತು ಜೀವಿಸುವ ಬೋಧಕರುಗಳು ಚಿಯೋನಿನ ಯಾತ್ರೆಯಲ್ಲಿ ದೈವಿಕ ಲಕ್ಷಣ ಮತ್ತು ಯೋಜನೆಗಳನ್ನು ತಿಳಿಸಿಕೊಡುವಲ್ಲಿ ಅವರಿಗೆ ಸಹಾಯಕ ಹಸ್ತಗಳಾಗಬಹುದು; ಆದರೆ, ದುರದೃಷ್ಟವಶಾತ್ ಅದು ಹಲವು ಬಾರಿ ವ್ಯತಿರಿಕ್ತವಾಗಿ ಬಿಡುತ್ತದೆ. ಅವರು ಪದೇ ಪದೇ ನ್ಯಾಯತೀರ್ವಿಕೆಯನ್ನು ಮುಸುಕುಮಾಡಿ, ಕಳವಳವನ್ನು ಉಂಟುಮಾಡಿಬಿಡುತ್ತಾರೆ ಮತ್ತು ದೇವರ ವಾಕ್ಯವನ್ನು ಅಪಾರ್ಥ ಮಾಡುತ್ತಾರೆ, ಇವುಗಳನ್ನು ನಂಬುವವರು ಬೆಳಕಿನತ್ತ ನಡೆಯದೆ ಅದರ ವಿರೋಧ ದಿಕ್ಕಿನಲ್ಲಿ ನಡೆಯುತ್ತಾರೆ.

ಈ ತಪ್ಪಾದ ಮಾರ್ಗದರ್ಶನವು ಉದ್ದೇಶಪೂರ್ವಕವಾದುದಲ್ಲ. ಬೋಧಕರುಗಳು ಮತ್ತು ಗ್ರಂಥಕರ್ತರುಗಳು ತಾವು ಹೊಂದಿರುವುದರಲ್ಲಿ ಅತ್ಯುತ್ತಮವಾದುದನ್ನು ತಮ್ಮ ಓದುಗರಿಗೆ ಕೊಡ ಬಯಸುತ್ತಾರೆ. ಈ ತೊಂದರೆಯ ಮೂಲವು ಬಹಳ ಪುರಾತನವಾದುದು. ಸುಮಾರು 1800 ವರ್ಷಗಳ ಹಿಂದೆ ಅಪೋಸ್ತಲರುಗಳು "ಗಾಢ ನಿದ್ರೆ' ಯಲ್ಲಿದ್ದಾಗ, ವೈರಿಯಾದ ಸೈತಾನನಿಗೆ ದೇವರ ಗೋಧಿಯ ಹೊಲವಾದ ಸಭೆಯಲ್ಲಿ ಧಾರಾಳವಾದ ಅವಕಾಶ ದೊರೆಯಿತು. ಕರ್ತನ ಸಾಮ್ಯದಲ್ಲಿ ಪ್ರವಾದಿಸಿದಂತೆ ಆತನು ಗೋಧಿಯ ನಡುವೆ ಹಣಜಿಯನ್ನು ಎಂಬಂತೆ ಅಂಧತ್ವದ ತಪ್ಪಾದ ಸರಕನ್ನು ಹೆಚ್ಚಾಗಿ ಬಿತ್ತಿಹೋದನು (ಮತ್ತಾಯ 13:24, 36–43). ಈ ತಪ್ಪುಗಳು ಹೆಚ್ಚುಕಡಿಮೆ ದೈವೀಕ ಪ್ರಕಟನೆಗಳ ಸತ್ಯ ಸಂಗತಿಗಳನ್ನು ತಿರುಚಿಹಾಕಿ ಅವನ್ನು ವಿರೂಪಗೊಳಿಸಿತು. ಇದರ ಫಲವಾಗಿ, ನಾಲ್ಕನೆಯ ಶತಮಾನವು ಉದಯವಾಗುವುದಷ್ಟರಲ್ಲಿ ದೇವರ ಗೋಧಿಹೊಲವು ಬಹುಮಟ್ಟಿಗೆ ಕೇವಲ ಅಲ್ಪ ಪ್ರಮಾಣದ ನಿಜವಾದ ಗೋಧಿಯುಳ್ಳ ಹಣಜಿಯ ಹೊಲವಾಯಿತು. ದೋಷವೆಂಬ ಅಂಧಕಾರವು ಸಭೆಯ ಮೇಲೆ ಹೆಚ್ಚು ಹೆಚ್ಚಾಗಿ ಆವರಿಸುತ್ತಾ ಹೋಯಿತು. ಹತ್ತು ಶತಮಾನಗಳವರೆಗೆ ಈ "ನೀಚ ಧಾರ್ಮಿಕ ರಹಸ್ಯವು" ಬಳಕೆಯಲ್ಲಿದ್ದು ದಟ್ಟವಾದ ಅಂಧಕಾರವು ಜನರ ಮೇಲೆ ಕವಿದಿತ್ತು. ಆ ಹತ್ತು ಶತಮಾನಗಳಿಗೆ ಕ್ರೈಸ್ತ ಪ್ರಪಂಚದ ಹೆಚ್ಚಿನ ಪ್ರಮಾಣದ ಬುದ್ಧಿವಂತರು "ಅಂಧಕಾರದ ಯುಗ"ವೆಂದು ಹೆಸರಿಟ್ಟರು. ಈ ದಟ್ಟವಾದ ಅಂಧಕಾರದ ನಡುವೆ ಧರ್ಮ ಸುಧಾರಣೆಯು ಆರಂಭವಾಯಿತೆಂದು ನಾವು ನೆನಪು ಮಾಡಿಕೊಳ್ಳಬೇಕು. ಸುಧಾರಣೆಯೆಂಬ ಬೆಳಕು ಅಂಧಕಾರದ ನಡುವೆ ಹರಡತೊಡಗಿತು. ಇದು ಅಂದಿನಿಂದ ಇಂದಿನವರೆಗೂ ಹೆಚ್ಚು ಹೆಚ್ಚಾಗಿ ಪ್ರಕಾಶಿಸುತ್ತಿರುವುದಕ್ಕಾಗಿ ದೇವರ ನಾಮಕ್ಕೆ ಸ್ತೋತ್ರವಾಗಲಿ! ಹೀಗಿದ್ದಾಗ್ಯೂ, ಈ ಅಂಧಕಾರದಲ್ಲಿ ಕಲಿತ ಸುಧಾರಕರು ಹೆಚ್ಚು ಕಡಿಮೆ ಅವುಗಳಿಂದ ಕಲುಷಿತರಾಗಿದ್ದ –ರೆಂಬುದಕ್ಕೆ ನಾವು ಆಶ್ಚರ್ಯಪಡಬೇಕಾಗಿಲ್ಲ. ಅವರು ತತ್‌ಕ್ಷಣದಲ್ಲಿ ಆ ಅಪವಿತ್ರ ದೋಷಗಳಿಂದ ತಮ್ಮನ್ನು ವಿಮುಕ್ತಿಗೊಳಿಸಿಕೊಳ್ಳಲಾಗಲಿಲ್ಲ. ಸುಮಾರಾಗಿ ಅವರು ದಟ್ಟವಾದ ಅಂಧಕಾರದಿಂದ ಸಂಪೂರ್ಣವಾದ ದೈವೀಕ ಲಕ್ಷಣ ಮತ್ತು ಯೋಜನೆಯ ಸ್ಪಷ್ಟ ಬೆಳಕಿನ ಕಡೆಗೆ ಧಾವಿಸಿದ್ದರೆ ನಾವು ಅದನ್ನು ಒಂದು ಅದ್ಭುತ ಸಂಗತಿಯೆಂದು ಪರಿಗಣಿಸುತ್ತಿದ್ದೆವು.

ಕಳೆದ ಮೂರು ಶತಮಾನಗಳಲ್ಲಿ ಈ ಸುಧಾರಕರ ಅನುಯಾಯಿಗಳಿಗೆ ಆದ ತೊಂದರೆಗಳಿಂದ ಅವರು ಈ

ಸುಧಾರಣಾ ಕಾಲದಲ್ಲಿ ಸೂತ್ರ ರೂಪದಲ್ಲಿ ಜಾರಿಗೆ ತಂದ ವಿಶ್ವಾಸದ ಮತಾಭಿಪ್ರಾಯಗಳನ್ನು ಅಂಗೀಕರಿಸುವುದು ಶ್ರೇಯಸ್ಕರವೆಂದು ಪರಿಗಣಿಸಿ ಅವುಗಳನ್ನು ಮಹಿಮೆ ಪಡಿಸಿದರು ಮತ್ತು ಬೆಳಕಿನೆಡೆಗೆ ಹೆಚ್ಚಿನ ಪ್ರಗತಿಯನ್ನು ಅಸಂಪ್ರದಾಯವೆಂದು ತಿಳಿದರು. ಇದಕ್ಕೆ ವಿರುದ್ಧವಾಗಿ, ಅವರು ಮತ್ತು ನಾವು ಸಹ ಧರ್ಮ ಸುಧಾರಕರನ್ನು ಗೌರವಿಸಿ ಅವರ ಸ್ವಾಮಿನಿಷ್ಠೆಯಲ್ಲಿ ಸಂತೋಷಪಡುವಾಗ ಅವರುಗಳು ಸಭೆಯ ಬೆಳಕಲ್ಲ, ಮಾರ್ಗದರ್ಶಿಗಳಾಗಿ ಕೊಡಲ್ಪಟ್ಟವರಲ್ಲ, ಹೆಚ್ಚೆಂದರೆ ಸಹಾಯಕರು ಮಾತ್ರ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ದೇವರಿಂದ ನಿಯೋಜಿಸಲ್ಪಟ್ಟ ಮಾರ್ಗದರ್ಶಿಗಳಲ್ಲಿ ಮೊಟ್ಟಮೊದಲು ನಮ್ಮ ಕರ್ತನು ತಾನೇ, ಎರಡನೆಯದಾಗಿ ಆತನ ಮೂಲಕ ಸ್ಫೂರ್ತಿಗೊಂಡು, ಮಾರ್ಗದರ್ಶನ ಪಡೆದುಕೊಂಡ ಅಪೋಸ್ತಲರುಗಳು. ಮೂರನೆಯದಾಗಿ, ಪರಿಶುದ್ಧಾತ್ಮನಿಂದ ಪ್ರೇರಿತರಾಗಿ ನಮ್ಮ ಎಚ್ಚರಿಕೆಗಾಗಿ ಮಾತನಾಡಿದ ಮತ್ತು ಬರೆದ ಹಿಂದಿನ ಕಾಲದ ದೇವರ ಪವಿತ್ರ ಜನರು. ನಿಜವಾದ ಬೆಳಕಿನ ಕ್ಷಣಿಕ ದರ್ಶನವನ್ನು ದೇವರು ಅವರಿಗೆ ಮಾಡಿಸಿದ್ದರಿಂದ ಧರ್ಮ ಸುಧಾರಕರುಗಳು ತಮ್ಮ ಸುತ್ತಲೂ ಕವಿದಿದ್ದ ಅಂಧಕಾರವನ್ನು ಭಾಗಶಃ ಗ್ರಹಿಸಿಕೊಳ್ಳಲು ಮತ್ತು ಅವುಗಳಿಂದ ತಪ್ಪಿಸಿಕೊಂಡು ನಮ್ಮ ಕರ್ತನಾದ ಯೇಸುಕ್ರಿಸ್ತನ ಮುಖದಲ್ಲಿ ಪ್ರಕಾಶಿಸುತ್ತಿರುವ ದೈವಜ್ಞಾನದ ಬೆಳಕಿನ ಕಡೆಗೆ ತಿರುಗಿ ಬರುವ ಸಾಹಸ ಮಾಡಲು ಸಾಧ್ಯವಾಯಿತು. ಇದು ಆತನ ಮತ್ತು ಅಪೋಸ್ತಲರುಗಳ ಮಾತುಗಳ ಮೂಲಕ ನಮ್ಮ ಕಾಲಿಗೆ ದೀಪವೂ, ಮಾರ್ಗಕ್ಕೆ ಬೆಳಕೂ ಆಗಿ ಕೊಡಲ್ಪಟ್ಟಿದ್ದು, ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ. ಈಗ ಯಾರಾದರೂ ಕರ್ತನ ಹಿಂಬಾಲಕರಾಗಿದ್ದಲ್ಲಿ ಅವರು ಲಕ್ಷ್ಯವಿಡಬೇಕಾದುದೆಂದರೆ, ಮೌಖಿಕವಾಗಿ ಮತ್ತು ಮುದ್ರಿತ ಪುಟಗಳ ಮೂಲಕ ಮಾಡಿದ ಮಾನವ ಸಾಧನೆ ಮತ್ತು ಅವರ ಸೇವೆಯನ್ನು ಕಡೆಗಣಿಸದೆ ದೇವರ ವಾಕ್ಯದಲ್ಲಿ ಸ್ಫೂರ್ತಿಗೊಂಡ ಸಂದೇಶಗಳನ್ನು ಮೆಚ್ಚಲು ನೆರವಾಗುವ ಅವರ ಸಹಾಯಗಳನ್ನು ಮಾತ್ರ ಅಂಗೀಕರಿಸಬೇಕು: "ಅವರು ಈ ವಾಕ್ಯಾನುಸಾರ ಮಾತನಾಡದೇ ಹೋದರೆ ಅದಕ್ಕೆ ಅವರಲ್ಲಿ ಬೆಳಕಿಲ್ಲದಿರುವುದೇ ಕಾರಣ"

ನಮ್ಮ ಕರ್ತನಾದ "ಯೇಸುಕ್ರಿಸ್ತನು ಮಾನವನಾಗುವ" ಬಹಳ ಮುನ್ನ "ದೇವರ ಸೃಷ್ಟಿಗೆ ಪ್ರಥಮನಾಗಿದ್ದನು" ಎಂದು ಹಿಂದಿನ ಅಧ್ಯಯನಗಳಲ್ಲಿ ನಾವು ಈಗಾಗಲೇ ನೋಡಿದ್ದೇವೆ. ದೇವರು ತನ್ನ ಸೃಷ್ಟಿಯ ಪ್ರಗತಿಪರ ಬೆಳವಣಿಗೆಗಳಲ್ಲಿ ತನ್ನ ಪ್ರಿಯ ಕುಮಾರನು, ಕೆರೂಬಿಯರು, ಸೆರಾಫಿಯರು ಮತ್ತು ದೇವದೂತರುಗಳ ವಿವಿಧ ವರ್ಗದವರ ಬಗ್ಗೆ ಸ್ವಲ್ಪಮಾತ್ರವಾದ ವಿವರ ನಮಗೆ ಪ್ರಕಟವಾಗಿವೆ. ಇವರ ಜೊತೆಗೂಡಿ ಕ್ರಿಸ್ತನು ಸೃಷ್ಠಿಯ ಕಾರ್ಯಗಳನ್ನು ಪೂರೈಸಿದನೆಂದು ನಾವು ನೋಡಿದ್ದೇವೆ. ನಾವು ಈಗಷ್ಟೆ ಈ ಲೋಕದ ಸೃಷ್ಟಿಯ ಪರೀಕ್ಷೆಯನ್ನು ಮಾಡಿ ಮುಗಿಸಿದ್ದೇವೆ ಮತ್ತು ದೈವೀಕ ಪ್ರಕಟನೆಯ ಬೆಳಕಿನಲ್ಲಿ ನುಡಿದ ಎಲ್ಲಾ ಮಾತುಗಳ ನೆರವೇರಿಕೆಯು ಎಷ್ಟೊಂದು ಭವ್ಯವಾಗಿರುತ್ತದೆಯೆಂದು ನೋಡಿದ್ದೇವೆ. ಆದರೆ ದೇವರ ವಾಕ್ಯವು ನಮಗೆ ಈಗ ಪರಿಶೀಲನೆಯಲ್ಲಿರುವ ನೂತನ ಸೃಷ್ಟಿಯನ್ನು ದೇವದೂತರ ಕ್ರಮಾಗತಿ ಮತ್ತು ಮನುಷ್ಯರಿಂದ ಭಿನ್ನವಾದುದು ಮತ್ತು ವೈಶಿಷ್ಟ್ಯಪೂರ್ಣವಾದುದೆಂದು ಪರಿಚಯಿಸಿಯದೆ. ಪರಲೋಕದ ತಂದೆಯು "ತನ್ನ ಎಲ್ಲಾ ಕಾರ್ಯವೂ ಸಮರ್ಪಕವಾಗಿದೆ" ಎಂದು ತಿಳಿದಿದ್ದು ತನ್ನ ಕಾರ್ಯದ ಎಲ್ಲಾ ಲಕ್ಷಣಗಳಲ್ಲಿ ಅವುಗಳು ಪ್ರತಿವರ್ಗದಲ್ಲಿಯೂ ಸಮರ್ಪಕವಾಗಿವೆ ಅಥವಾ ಹಿಂದಿನ ಅಧ್ಯಾಯದಲ್ಲಿ ಹೇಳಿದ ಮಹಾ ಜೂಬಿಲಿಯ ವೇಳೆಗೆ ಎಲ್ಲವೂ ಸಂಪೂರ್ಣವಾಗುತ್ತದೆಂದು ತೃಪ್ತಿಗೊಂಡಿದ್ದಾನೆ. ಹಾಗಾದರೆ, ಈ ವಿವಿಧ ವರ್ಗಗಳ ರಚನೆಯು ಸೃಷ್ಟಿಕರ್ತನ ಪಾಲಿಗೆ ಅತೃಪ್ತಿಯನ್ನು ಸೂಚಿಸುವುದಾಗಿದೆ ಮತ್ತು ಇದು ಇನ್ನೂ ಉತ್ತಮವಾದವುಗಳನ್ನು ಮಾಡುವ ಪ್ರಯತ್ನವೆಂದು ತಪ್ಪಾಗಿ ತಿಳಿಯಬಾರದು. ಬದಲಾಗಿ ನಾವಿಲ್ಲಿ ದೇವರ ನಾನಾ ಬಗೆಯ ಜ್ಞಾನದ ದೃಷ್ಟಾಂತವನ್ನು ಕಾಣುವವರಾಗಿದ್ದೇವೆ. ಪ್ರಕೃತಿಯಲ್ಲಿ ನಾವು ಕಾಣುವ ವಿವಿಧ ಬಗೆಯ ಹೂವುಗಳು, ಹುಲ್ಲು, ಮರಗಳು ಮತ್ತು ವಿವಿಧ ಬಗೆಯ ಪ್ರಾಣಿಗಳು ಇದಕ್ಕೆ ಉದಾಹರಣೆಗಳಾಗಿವೆ. ಪ್ರತಿಯೊಂದು ಅದರದರ ಜಾತಿಯ ಸಮಕ್ಷೇತ್ರದಲ್ಲಿ ಪರಿಪೂರ್ಣವಾಗಿವೆ. ರೋಜಾ ಹೂವಿನ ಗಿಡ ಗುಲಾಬಿ ಬಣ್ಣದಿಂದ ವಿವಿಧ ಬಗೆಯ ಗಿಡಗಳಾಗಿ ಮುಂದುವರಿಯುವುದರ ಬಗ್ಗೆ ಅತೃಪ್ತಿಯಿಲ್ಲ, ಬದಲಾಗಿ ವಿವಿಧ ಬಗೆಯ ಸ್ವರೂಪಗಳು ಮತ್ತು ವಾಸನೆಗಳು ನಮಗೆ ದೇವರ ಮನಸ್ಸಿನ ಉದ್ದ, ಅಗಲ ಎತ್ತರ ಮತ್ತು ಆಳದ ಸುಳಿವನ್ನು ನೀಡುತ್ತದೆ; ಸಾಮರಸ್ಯದಲ್ಲಿ ವೈವಿಧ್ಯತೆಗಳಿರುವುದಲ್ಲದೆ ವಿವಿಧ ಸ್ವರೂಪದಲ್ಲಿ, ವಿನ್ಯಾಸಗಳಲ್ಲಿ, ಬಣ್ಣಗಳಲ್ಲಿ, ಸೌಂದರ್ಯ ಮತ್ತು ಸಮರ್ಪಕತೆಯು ಕಂಡುಬರುತ್ತದೆ. ಅದೇ ರೀತಿಯಲ್ಲಿ ಬುದ್ಧಿವಂತ ಸೃಷ್ಟಿಕೃತಿಗಳಲ್ಲಿ– ವಿವಿಧ ಹಂತಗಳಲ್ಲಿರುವ ದೇವಪುತ್ರರಲ್ಲಿಯೂ ಸಹಾ ಕಂಡುಬರುತ್ತದೆ.

ಈ ದೃಷ್ಟಿ ಕೋನದಿಂದ ನಾವು ಗ್ರಹಿಸುವುದೇನೆಂದರೆ, ದೇವರು ತರಲಿರುವ ಅನೇಕ ವೈವಿದ್ಯ ಸೃಷ್ಟಿಗಳ ನಡುವೆ ಅಸೂಯೆಗೆ ಅವಕಾಶವಿಲ್ಲ, ಯಾಕೆಂದರೆ ಪ್ರತಿಯೊಂದೂ ತಮ್ಮ ಜಾತಿಯಲ್ಲಿ ಸಮರ್ಪಕವಾಗಿವೆ ಮತ್ತು ತಮ್ಮ ಸ್ವಂತ ಸ್ಥಿತಿಯ ಬಗ್ಗೆ ತೃಪ್ತಿಯಿಂದಿವೆ – ಮೀನೊಂದು ತಾನು ಹಕ್ಕಿಯಾಗುವುದಕ್ಕಿಂಥಾ ಮೀನಾಗಿರುವುದರಲ್ಲೇ ತೃಪ್ತಿಪಡುತ್ತದೆ – ಅದೇ ರೀತಿ ಹಕ್ಕಿಯೂ ಸಹಾ, ಅದು ತನ್ನ ಪರಿಸರದೊಂದಿಗೆ ಉತ್ತಮ ರೀತಿಯಲ್ಲಿ ತೃಪ್ತಿಪಡೆದಿದೆ, ಅದೇ ರೀತಿಯಲ್ಲಿ ಮಾನವ ಜೀವಿಯೂ ಸಹಾ ಏದೇನಿನ ಪರಿಸ್ಥಿತಿಯಲ್ಲಿ ಆತನನ್ನು ಮಾನವ ಪರಿಪೂರ್ಣತೆಗೆ ಪುನಃ ಸ್ಥಾಪಿಸುವಾಗ ಆ ಪರಿಸ್ಥಿತಿಗೆ ಸಂಪೂರ್ಣವಾಗಿ ತೃಪ್ತಿಗೊಳ್ಳುತ್ತಾನೆ, ಯಾಕೆಂದರೆ ಅವರು ಯಾವುದೇ ವರ್ಗದ ದೇವದೂತರಾಗಲು ದುರಾಸೆ ಪಡುವವರಲ್ಲ ಅಥವಾ ಅವರು ನೂತನ ಸೃಷ್ಟಿಗೆ ದಯಪಾಲಿಸಿರುವ "ದೈವ ಸ್ವಭಾವ"ವೆಂಬ ಅತ್ಯುತ್ತಮ ಸ್ವಭಾವವನ್ನು ಆಶಿಸುವವರಲ್ಲ (2 ಪೇತ್ರ 1: 4). ದೇವದೂತರುಗಳು ಸಹಾ ಕೆರೂಬಿಯರು ಮತ್ತು ಸೆರಾಫಿಯರ ಸ್ವಭಾವ ಅಥವಾ ಮಾನವ ಸ್ಥಿತಿಯನ್ನು ಆಶಿಸುವವರಲ್ಲ. ಪ್ರತಿಯೊಬ್ಬರೂ ಅಂತಿಮವಾಗಿ ದೈವ ಸ್ವಭಾವವು ಎಲ್ಲಾದಕ್ಕಿಂತ ಹೆಚ್ಚಾದುದೆಂದು ಅರಿತುಕೊಳ್ಳುತ್ತಾರೆ; ಯಾಕೆಂದರೆ ಅದರಲ್ಲಿ ಎಲ್ಲಾ ಸ್ವಭಾವಗಳನ್ನು ಮೀರಿಸುವ ಗುಣಲಕ್ಷಣಗಳು, ಪರಿಸ್ಥಿತಿಗಳು ಅವೆ; ಆದಾಗ್ಯೂ, ದೇವರ ವ್ಯವಸ್ಥೆಯಲ್ಲಿ ಪ್ರತಿಯೊಂದು ಸ್ವಭಾವವೂ ತನ್ನದೇ ಆದ ಪರಿಸ್ಥಿತಿ ಮತ್ತು ಪರಿಸರಕ್ಕೆ ಸಮಗ್ರವಾಗಿ ಸ್ವೀಕೃತಿಗೊಂಡಿವೆ ಮತ್ತು ತನ್ನ ಸ್ಥಿತಿಯಲ್ಲಿ ತೃಪ್ತಿಯಿಂದಿದೆ.

ಯೆಹೋವ ದೇವರು ನೂತನ ಸೃಷ್ಟಿಯನ್ನು – ದೈವ ಸ್ವಭಾವದ ಪಾಲುದಾರರನ್ನು (2 ಪೇತ್ರ 1: 4)– ಆತನ ಸ್ವಂತ ಪ್ರಭಾವ, ಮಾನ ಮತ್ತು ನಿರ್ಲಯತ್ವಗಳ ಪಾಲುದಾರರನ್ನಾಗಿಸಲು (ರೋಮಾ2:7) ಉದ್ದೇಶಿಸಿದಾಗ, ಯಾರಿಗೂ ಅತಿ ಎತ್ತರದ ಸ್ಥಾನ ನೀಡಿ ನಂತರ ಅವರನ್ನು ಪರೀಕ್ಷೆಗೊಳಪಡಿಸುವುದು ಎಂಬದಾಗಿ ಅಲ್ಲ, ಬದಲು ಯಾರ್ಯಾರು ಈ ನೂತನ ಸೃಷ್ಟಿಯಾಗಲು ಬರುತ್ತಾರೋ ಅವರು ತಮ್ಮನ್ನು ದೈವ ಸ್ವಭಾವದ ಈ ನೂತನ ಸೃಷ್ಟಿಯ ಶ್ರೇಷ್ಟ ಸ್ಥಾನಕ್ಕೆ ಏರುವ ಮೊದಲೇ ಪರೀಕ್ಷೆಗೆ ಒಳಪಡಬೇಕು ಮತ್ತು ತಮ್ಮ ಸೃಷ್ಟಿಕರ್ತನಿಗೆ ಮತ್ತು ತನ್ನ ನೈತಿಕ ಅಧಿಕಾರಕ್ಕೆ ಹೆಚ್ಚಿನ ನಿರಪೇಕ್ಷತೆಯಿಂದೊಡಗೂಡಿದ ನಿಷ್ಟೆಯನ್ನು ಸಾಬೀತು ಪಡಿಸಬೇಕಾಗುತ್ತದೆಂದು ನಿರ್ಧರಿಸಿದನು. ಯಾವ ರೀತಿಯಲ್ಲಿ ನಿತ್ಯಜೀವಕ್ಕೆ ಬಾಧ್ಯರಾಗುವಂತೆ ಶೋಧನೆ ಮತ್ತು ಪರೀಕ್ಷೆಗಳು ವ್ಯವಸ್ಥೆಗೊಳಿಸಲಾಗಿದೆ ಎಂಬುದನ್ನು – ಮಾನವನು ಮೂಲತಃ ಪರಿಪೂರ್ಣನಾಗಿ ಸೃಷ್ಠಿಯಾಗಿದ್ದು, ಆತನ ಪತನ, ಆತನ ಉದ್ಧಾರ, ಯೋಗ್ಯರೆಂದು ಕಂಡು ಬರುವ ಆತನ ಎಲ್ಲಾ ಸಂತತಿಯುವರ ಪುನರುತ್ಥಾನ ಮತ್ತು ಪುನಃವಶ ಎಂಬಿತ್ಯಾದಿಗಳನ್ನು ನಾವು ಈಗತಾನೇ ನೋಡಿದ್ದೇವೆ. ದೇವದೂತರುಗಳು ಸಹಾ ತಮ್ಮ ಸ್ವಭಾವಕ್ಕೆ ತಕ್ಕಂತೆ ಪರಿಪೂರ್ಣತೆ ಮತ್ತು ಪವಿತ್ರತೆಗಳಲ್ಲಿ ಉಂಟುಮಾಡಲ್ಪಟ್ಟರು ಮತ್ತು ತರುವಾಯ ಅವರುಗಳು ಸಹಾ ಶೋಧನೆ ಮತ್ತು ಪರೀಕ್ಷೆಗಳಿಗೆ ಒಳಗಾದರು ಎಂಬುದನ್ನೂ ನಾವು ನೋಡಿದ್ದೇವೆ; ಆದರೆ – ದೈವ ಸ್ವಭಾವದ ನೂತನ ಸೃಷ್ಟಿಗಳಿಗೂ ಇಂತಹ ವಿಧಾನ (ಸಮರ್ಪಕವಾದ ಸೃಷ್ಟಿ ಮತ್ತು ನಂತರದಲ್ಲಿ ಶೋಧನೆ ಮತ್ತು ಪರೀಕ್ಷೆಗಳು) ಅನ್ವಯವಾಗುವುದಿಲ್ಲ. ಯಾಕೆ? ಯಾಕೆಂದರೆ ದೈವಸ್ವಭಾವದ ಮುಖ್ಯವಾದ ವಿಷಯ ಅಮರತ್ವ ಮತ್ತು ಈ ಪದವು ಸಾವಿಲ್ಲದ ಸ್ಥಿತಿಯನ್ನು ಸೂಚಿಸುತ್ತದೆಂದು ನಮಗೆ ತಿಳಿದುಬರುವಾಗ ನಾವು ಸಿದ್ಧರಾಗಿ ಕಾಣಬಹುದಾದುದೇನೆಂದರೆ, ದೈವೀಕ ಸಮಕ್ಷೇತ್ರದಲ್ಲಿ ಸೃಷ್ಟಿಗೊಂಡ ಯಾವ ಜೀವಿಯೂ ಅಮರತ್ವ, ನಿರ್ಲಯತ್ವಗಳುಳ್ಳದ್ದಾಗಿದ್ದು ಕ್ರಮೇಣವಾಗಿ ಶೋಧನೆ ಮತ್ತು ಪರೀಕ್ಷೆಗಳಿಗೊಳಪಡುವುದೆಂದರೆ ಅವುಗಳು ನಿರಪೇಕ್ಷವಾದ ದೈವ ನಿಷ್ಟೆಯ ಅವಶ್ಯ ಮಟ್ಟ ತಲುಪಲು ವಿಫಲವಾಗಿರುವುದು ಎಂದರ್ಥ. ಅವರು ನಾಶಪಡದ ಅಮರತ್ವವುಳ್ಳ ಆಕ್ರಮಣಕಾರಿಗಳಾಗಬಹುದಿತ್ತು ಮತ್ತು ಆಕ್ರಮಣಕಾರಿಗಳಾಗಿ, ಪಾಪಿಗಳಾಗಿ ಅಮರತ್ವದಲ್ಲಿ ಅವರ ಮುಂದುವರಿಕೆಯು ಈ ವಿಶ್ವದ ಸುಂದರ ಸೃಷ್ಟಿಗೆ ಅನೇಕ ಕಳಂಕಗಳನ್ನು, ಅಪನಿಂದೆಯನ್ನೂ ತಂದಿರುತ್ತಿತ್ತು. ದೇವರು ಇದು ಸಂಭವಿಸಬಹುದೆಂದು ಮೊದಲೇ ಅರಿತಿದ್ದನು. ತನ್ನ ಸೃಷ್ಟಿಗಳಲ್ಲಿ ವಿಶೇಷ ಕೃಪೆಯುಳ್ಳ ಈ ವರ್ಗದ ಬಗ್ಗೆ ದೇವರು ಆಯ್ದುಕೊಂಡ ಈ ಜ್ಞಾನತುಂಬಿರುವ ಆಳವಾದ ಯೋಜನೆಯನ್ನು – ಅಂದರೆ, ಅವರುಗಳು ಮರ್ತ್ಯರಾಗಿರುವಾಗಲೇ, ಅಂದರೆ ಮರಣ ಹೊಂದುವ ಸ್ವಭಾವವುಳ್ಳ ಇತರ ವರ್ಗದ ಸದಸ್ಯರಾಗಿರುವಾಗಲೇ ಅವರುಗಳನ್ನು ತೀಕ್ಷಣವಾದ ಅನೇಕ ಕಠಿನ ಪರೀಕ್ಷೆಗಳಿಗೆ ಒಳಪಡಿಸುವುದು ನಾವಿಲ್ಲಿ ಗ್ರಹಿಸಬಹುದು.

ನಮ್ಮ ಮನಸ್ಸಿನಲ್ಲಿ ನಾವು ಆ ಮಹಾ ಸೃಷ್ಟಿಕರ್ತನ ಆಪ್ತ ಸ್ನೇಹಿತರುಗಳು ಎಂದಿಟ್ಟುಕೊಂಡು ಈ ನೂತನ ಸೃಷ್ಟಿಯ ವ್ಯವಸ್ಥೆಯಲ್ಲಿ ಅಡಗಿರುವ ತತ್ವಜ್ಞಾನವನ್ನು ಊಹಿಸುವುದಾದರೆ, ಯೆಹೋವ ದೇವರು ತನ್ನಷ್ಟಕ್ಕೇ ಈ ನೂತನ ಸೃಷ್ಟಿಯ ಬಗ್ಗೆ ಈ ರೀತಿಯಲ್ಲಿ ಧ್ಯಾನಾಸಕ್ತನಾಗಿರುವಂತೆ ಊಹಿಸಬಹುದು: ಅನೇಕ ಸೃಷ್ಟಿಜೀವಿಗಳಲ್ಲಿ ಶ್ರೇಷ್ಟ ವರ್ಗಕ್ಕೆ ಪರಿವರ್ತನೆಗೊಳ್ಳುತ್ತಿರುವ ಈ ಪ್ರಾಮುಖ್ಯತೆ ಪಡೆದವರನ್ನು ನಾನು ದೇವಕುಮಾರರ ಯಾವ ವರ್ಗಕ್ಕೆ ಸಮರ್ಪಿಸಬಹುದು? ಪ್ರತಿಯೊಂದು ಶ್ರೇಣಿಯೂ ನನ್ನ ಸ್ವರೂಪದಲ್ಲಿ ಈಗಾಗಲೇ ಇದೆ –ಮಾನವ, ದೇವದೂತರುಗಳು, ಕೆರೂಬಿಯರು, ಸೆರಾಫಿಯರು ಮತ್ತು ಪ್ರಧಾನ ದೇವದೂತರುಗಳು – ನನ್ನ ಯೋಜನೆಗಳು ಅತ್ಯುನ್ನತ ಸ್ಥಿತಿಗೇರಿದಾಗ ಮತ್ತು ಎಲ್ಲಾ ಪರೀಕ್ಷೆಗಳು ಮುಗಿಯುವಾಗ ಎಲ್ಲರೂ ಅವರವರ ಶ್ರೇಣಿಯಲ್ಲಿ ಪರಿಪೂರ್ಣ ಮಟ್ಟದಲ್ಲಿದ್ದು ಪರಮ ಸಂತೋಷಪಡುತ್ತಾರೆ – ಆದರೆ ದೇವರ ಸ್ವಭಾವದ ಪಾಲುದಾರರಾಗುವ ಅತ್ಯಂತ ವೈಭಯುತವಾದ ಆಶೀರ್ವಾದ ಮತ್ತು ಅವಕಾಶಗಳನ್ನು ಯಾರಿಗೆ ನಾನು ದಯಪಾಲಿಸಲಿ?. ಸ್ವಭಾವಿಕವಾಗಿ, "ಪ್ರಥಮವಾಗಿ ಜೇಷ್ಠಪುತ್ರನ ಸ್ಥಾನ ಪಡಕೊಂಡವನು'(First begotten) ಈಗಾಗಲೇ ಪರಮ ಶ್ರೇಷ್ಟನಾಗಿ, ಅಸಂಖ್ಯಾತರಲ್ಲಿ ಅತ್ಯಮೂಲ್ಯನಾಗಿ, ತನ್ನ ನಂತರದ ಸ್ಥಾನದಲ್ಲಿರುವವನಾಗಿ ತೋರಿಬರುತ್ತಾನೆ; ಮತ್ತು ಆತನ ಮೂಲಕವಾಗಿ ಎಲ್ಲವೂ ನಿರ್ಮಾಣಗೊಂಡಿರುವುದಲ್ಲದೆ, ಸರ್ವಶಕ್ತನು, ವಿಶಿಷ್ಟವಾಗಿ ಎಲ್ಲವುಗಳಲ್ಲಿ ತನ್ನ ತಂದೆ ಮತ್ತು ಸೃಷ್ಟಿಕರ್ತನಿಗೆ ಸ್ವಾಮಿಭಕ್ತಿ ಮತ್ತು ನಿಷ್ಠೆಯನ್ನು ತೋರಿದವನು ಎಂಬುದಾಗಿ ಆತನು ದೇವರ ಮನಸ್ಸಿಗೆ ತಡವಿಲ್ಲದೆ ಕಂಡುಬರುತ್ತಾನೆ. ಆದುದರಿಂದ, ಆತನಿಗೆ ಪ್ರಥಮವಾಗಿ ದೇವರ ಸ್ವಭಾವ, ಆತನ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳು ನೀಡಲ್ಪಡುತ್ತವೆ. “ಆತನಲ್ಲಿ ತನ್ನ ಸರ್ವಸಂಪೂರ್ಣತೆಯೂ ವಾಸವಾಗಿರಬೇಕೆಂತಲೂ ತಂದೆಯು ಇಚ್ಛೈಸಿದ್ದನು.” – ಆತನು ಎಲ್ಲಾದರಲ್ಲಿ ಪ್ರಮುಖನಾಗುವಂತೆ ತನ್ನ ಸರ್ವ ಸಂಪೂರ್ಣತೆಯು ಆತನಲ್ಲಿ ವಾಸವಾಗಿರಬೇಕೆಂದು ತಂದೆಯು ಬಯಸಿದನು (ಕೊಲೊಸ್ಸೆ 1:18–19). ಆತನಿಗೀಗಾಗಲೇ ಎಲ್ಲವುಗಳ ಮೇಲೆ ಪ್ರಾಬಲ್ಯವಿತ್ತು ಮತ್ತು ಅದನ್ನು ಆತನ ಪ್ರಾಮಾಣಿಕತೆಯಿಂದ ಉಪಯೋಗಿಸುತ್ತಿದ್ದನು. ತಂದೆಯು ಕೊಡಬಯಸುವ ಯಾವುದೇ ಹೆಚ್ಚಿನ ಗೌರವ, ಅಂತಸ್ತುಗಳಿಗೆ ಆತನು ಸ್ವಾಭಾವಿಕವಾಗಿ ಪ್ರಗತಿಯ ಸ್ಥಾನದಲ್ಲಿದ್ದನು. ಇದ್ದವರಿಗೆ ಇನ್ನೂ ಕೊಡಲ್ಪಡುವುದು ಮತ್ತು ಅದನ್ನು ಆತನು ಹೇರಳವಾಗಿ ಪಡಕೊಳ್ಳುವನು: ಪ್ರಾಮಾಣಿಕತೆಗೆ ಬಹುಮಾನವುಂಟು. ಆದಾಗ್ಯೂ, ಇವರು ಸಹಾ ಶೋಧನೆ, ಅನುಭವಗಳು ಮತ್ತು ಹೆಚ್ಚಿನ ಕಠಿಣ ಶಿಸ್ತಿಗೆ ಒಳಗಾಗಬೇಕಾಗುತ್ತದೆ. ಹೀಗಿದ್ದಾಗ್ಯೂ ಬಹಳ ನಿಷ್ಟೆಯುಳ್ಳ, ಶ್ರದ್ಧಾ ಭಕ್ತಿಯುಳ್ಳ ಒಬ್ಬ ಮಗನ ವಿಶ್ವಾಸ ಮತ್ತು ನಿಷ್ಟೆಯನ್ನು ಕಠಿಣವಾದ ನಿರ್ಣಾಯಕ ಪರೀಕ್ಷೆಗಳಿಗೆ ಒಳಪಡಿಸದೆ ಆತನಿಗೆ ದೈವಿಕ ಸ್ವಭಾವದಲ್ಲಿ ಪಾಲನ್ನು ದಯಪಾಲಿಸುವಂತಿಲ್ಲ.

ನೂತನ ಸೃಷ್ಟಿಯ ಬಗ್ಗೆ ಈ ಮುಖ್ಯ ಆಂಶಗಳು, ಈ ನೂತನ ಸೃಷ್ಟಿಯ ಮುಖ್ಯಸ್ತನಾಗಿ ಈ ಏಕಪುತ್ರನ (only begotten son) ಆಯ್ಕೆ ಮತ್ತು ಆತನ ಯೋಗ್ಯತೆಯನ್ನು ರುಜುವಾತು ಪಡಿಸುವುದಕ್ಕಾಗಿ ಆತನನ್ನು ಶೋಧನೆಗಳಿಗೆ, ಶಿಸ್ತಿಗೆ, ಶ್ರಮೆಗೆ ಮತ್ತು ಇತರ ಅನುಭವಗಳಿಗೆ ಒಳಪಡಿಸುವುದಾಗಿದೆ. ಇವುಗಳು ಮಾನವನು ಸೃಷ್ಟಿಗೊಳ್ಳುವ ಮೊದಲೇ ದೈವಸಭೆಯಲ್ಲಿ ನಿರ್ಣಯವಾಗಿತ್ತು. ದೇವರಿಗೆ ತನ್ನ

ತನ್ನ ಸೃಷ್ಟಿಯಾದ ಮಾನವನು ಪತನಗೊಳ್ಳುತ್ತಾನೆ ಎಂಬುದು ಮೊದಲೇ ತಿಳಿದಿತ್ತು. ಆತನ ಶಿಕ್ಷೆ ಮರಣವೆಂದು ಆತನು ಮೊದಲೇ ನಿರ್ಧರಿಸಿದ್ದನು; ಮತ್ತು ಆತನು ತನ್ನ ಏಕೈಕ ಪುತ್ರನಿಗೆ ನೀಡುವ ಪರೀಕ್ಷೆಗಳು ಆತನು ಸ್ವಇಚ್ಛೆಯಿಂದ ಮಾನವ ಜಾತಿಯ ವಿಮೋಚಕನಾಗುವಂತೆ ಪೂರ್ವಸಿದ್ಧತೆಯುಳ್ಳದಾಗಿದ್ದು, ಇದರಿಂದುಂಟಾಗುವ ಮಹಾ ತ್ಯಾಗವು ತಂದೆಯ ಬಗ್ಗೆ ಆತನ ನಿಷ್ಠೆ ಮತ್ತು ವಿಶ್ವಾಸಗಳನ್ನು ಪ್ರಕಟಿಸುವುದಾಗಿತ್ತು. ಈ ರೀತಿಯಲ್ಲಿ, ದೇವರ ಯೋಜನೆಯಲ್ಲಿ ಆತನು ಭೂಮಿಯ ಅಸ್ತಿವಾರ ಹಾಕುವ ಮುನ್ನವೇ ಯಜ್ಞದ ಕುರಿಯಾಗಿದ್ದನು. ಈ ದೃಷ್ಟಿಕೋನದಲ್ಲಿ ನಾವು ಇದುವರೆಗೆ ತಂದೆಯು, ಮಗನು ವಿಮೋಚಕನಾಗಲು ಒತ್ತಾಯಪಡಿಸದೆ, ಆತನಿಗೆ ಯಾವ ಅನ್ಯಾಯವನ್ನು ಮಾಡದಂತೆ ದೂರವಿದ್ದು ಈ ಮಹಾತ್ಯಾಗಕ್ಕೆ ಆತನನ್ನು ಯಾವರೀತಿಯಲ್ಲಿ ಸಿದ್ಧಪಡಿಸುತ್ತಿದ್ದನೆಂದು ಗ್ರಹಿಸಬಹುದು. "ಈತನು ದೇವದೂತರಿಗಿಂತಲೂ ಉತ್ತಮವಾದವನು ಅವರಿಗಿಂತ ಶ್ರೇಷ್ಠವಾದ ಹೆಸರನ್ನು ಹೊಂದಿದವನು" (ಇಬ್ರಿಯ 1:4 ಮತ್ತು ಎಫೆಸ 1:21).

ಈ ದೃಷ್ಟಿಕೋನದಿಂದ ನಾವು "ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡನು" (ಇಬ್ರಿಯ 12:2) ಎಂಬ ಅಪೋಸ್ತಲನ ಹೇಳಿಕೆಗೆ ಆಶ್ಚರ್ಯ ಪಡಬೇಕಾಗಿಲ್ಲ. ಈ ಸಂತೋಷವು ಕೇವಲ ಈ ನೂತನ ಸೃಷ್ಟಿಯ ಎಲ್ಲಾ ಜೀವಿಗಳ ಮೇಲಿನ ಅತ್ಯುನ್ನತ ಸ್ಥಾನದ ನಿರೀಕ್ಷೆಯದಲ್ಲ. ಆದರೆ ಇದು ಅದರ ಭಾಗವೆಂದು ನಾವು ಸಕಾರಣವಾಗಿ ಗ್ರಹಿಸಬಹುದು. ಆದಾಗ್ಯೂ, ತಾನು ಪರೀಕ್ಷೆಗಳನ್ನನುಭವಿಸುವಾಗ ವಿಮೋಚಕನು ತನ್ನ ತಂದೆಗೆ ಮಾಡಿದ ಪ್ರಾರ್ಥನೆಯಲ್ಲಿ ಆತನು ತನಗೆ ವಾಗ್ದಾನಗೊಂಡಿರುವ ಮತ್ತು ನಿರೀಕ್ಷಿಸುವ ಮಹಾ ಘನತೆ, ಮಹಿಮೆ ಮತ್ತು ನಿರ್ಲಯತ್ವಗಳನ್ನು ಉಲ್ಲೇಖಿಸಲಿಲ್ಲ; ಆದರೆ ಸುಂದರವಾದ ಸರಳತೆ ಮತ್ತು ನಮ್ರತೆಗಳಿಂದ ತನ್ನನ್ನು ಪೂರ್ವಸ್ಥಿತಿಗೆ ಮರಳಿಸಬೇಕೆಂದು ಬೇಡಿಕೊಂಡನು; ತಂದೆಯಿಂದ ತಾನು ದೈವಿಕ ಯೋಜನೆಗಳ ಇತರ ಲಕ್ಷಣಗಳನ್ನು ನೆರವೇರಿಸುವ ಕಾರ್ಯಭಾರಿಯಾಗಿ ಆಯ್ಕೆಯಾಗಿರುವುದು, ಈ ಮೊದಲು ಸೃಷ್ಟಿಗೊಂಡ ಎಲ್ಲವುಗಳ ಕಾರ್ಯಭಾರಿಯಾದಂತೆ (ಯೋಹಾನ 1:3) ಒಂದು ರೀತಿಯ ಗೌರವವೆಂದೆಣಿಸಿದನು. ಆತನ ಸರಳ ಮಾತುಗಳೆಂದರೆ – ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು (ಯೋಹಾನ 17:5) ಆದರೆ ತಂದೆಯ ಉತ್ತರವು ಅರ್ಥಪೂರ್ಣವಾಗಿದ್ದು ಆತನು ಹೀಗೆ ಹೇಳಿದನು – ನಾನೀಗಾಗಲೇ ಮಹಿಮೆ ಪಡಿಸಿದ್ದೇನೆ, ನಾನು ನಿನ್ನನ್ನು ತಿರುಗಿ ಮಹಿಮೆಪಡಿಸುವೆನು (ಯೋಹಾನ 12:28).

ಆದರೆ ಮುಂದುವರೆದು, ತಂದೆಯು ತನ್ನಲ್ಲಿ ಉದ್ದೇಶಿಸಿದ್ದೇನೆಂದರೆ ನೂತನಸೃಷ್ಟಿಯು ಒಬ್ಬ ವ್ಯಕ್ತಿಯನ್ನು ಮಾತ್ರ ಒಳಗೊಂಡಿರಬಾರದು ಆದರೆ ಆತನಿಗೆ ಸಹೋದರರುಗಳು ಇರಬೇಕೆಂದು (ಇಬ್ರಿಯ 2:17). ಈ ಸಹೋದರರುಗಳು ಯಾರಾಗಿರಬೇಕು? ಇವರನ್ನು ಯಾವ ವರ್ಗದಿಂದ ಆರಿಸಿಕೊಳ್ಳಬೇಕು? ಕೆರೂಬಿಯರಿಂದಲೋ? ಸೆರಾಫಿಯರಿಂದಲೋ? ದೇವದೂತರುಗಳಿಂದಲೋ? ಅಥವಾ ಮಾನವರಿಂದಲೋ? ಯಾವುದೇ ವರ್ಗದಿಂದಾಗಲಿ ಅವರನ್ನು ಏಕೈಕಮಗನನ್ನು ಒಳಪಡಿಸಿದ ಹಾಗೆಯೇ ಅದೇ ಪರೀಕ್ಷೆಗಳಿಗೆ ಒಳಪಡಿಸಬೇಕು, ಯಾಕೆಂದರೆ, ಅವರು ಸಹಾ ಆತನ ಮಹಿಮೆಯಲ್ಲಿ, ಗೌರವ ಮತ್ತು ನಿರ್ಲಯತ್ವಗಳಲ್ಲಿ ಪಾಲುದಾರರಾಗಬೇಕು. ಆತನಿಗೆ ನೀಡಿದ ಪರೀಕ್ಷೆ ಯಾವುದೆಂದರೆ – "ಮರಣವನ್ನಾದರೂ ಹೊಂದುವಷ್ಟು ವಿಧೇಯತ್ವ" (ಫಿಲಿಪ್ಪಿ 2:8). ಆದುದರಿಂದ ಆತನೊಂದಿಗೆ ನೂತನ ಸೃಷ್ಟಿಯಲ್ಲಿ, ದೈವ ಸ್ವಭಾವದಲ್ಲಿ ಪಾಲುದಾರರಾಗುವ ಎಲ್ಲರೂ ಆತನ ಶೋಧನೆಗಳಲ್ಲಿ, ಶ್ರಮೆಯಲ್ಲಿ ಮತ್ತು ಪರೀಕ್ಷೆಗಳಲ್ಲಿ ಪಾಲುದಾರರಾಗಿ ಮರಣದ ಪರ್ಯಂತ ಪ್ರಾಮಾಣಿಕರಾಗಿದ್ದೇವೆಂದು ರುಜುವಾತುಪಡಿಸಬೇಕು. ಈ ಕೊಡುಗೆಯನ್ನು ಬೇರೆ ಯಾವುದೇ ದೇವದೂತ ವರ್ಗಕ್ಕೆ ನೀಡಿದ್ದಲ್ಲಿ ಅದೊಂದು ಬೇರೆಯದೇ ಆದ ದೈವಿಕ ಯೋಜನೆ ಎನಿಸುತ್ತಿತ್ತು. ಇದು ಈಗ ನೆರವೇರುತ್ತಿರುವುದನ್ನು ನಾವು ಕಾಣುತ್ತೇವೆ. ಪವಿತ್ರ ದೇವದೂತರುಗಳು ತಮ್ಮ ಅನುಭವ ಮತ್ತು ತಿಳುವಳಿಕೆಗಳನ್ನು ಪಾಪ ಮತ್ತು ಮರಣದೊಂದಿಗೆ ಸಂಪರ್ಕವಿಲ್ಲದೆ ಕೇವಲ ಗಮನಿಸುವುದರಿಂದ ಹೊಂದುತ್ತಿದ್ದಾರೆ ಎಂಬುದನ್ನು ನಾವು ನೋಡುತ್ತಿದ್ದೇವೆ. ದೇವದೂತರುಗಳಲ್ಲಿ ಇಂತಹ ಪರಿಸ್ಥಿತಿಯನ್ನು ಊಹಿಸಲು ಅವರಲ್ಲಿ ಕೆಲವರನ್ನು ಮರಣಹೊಂದಲು ಬಿಡುವುದಾದಲ್ಲಿ ದೇವದೂತರುಗಳಲ್ಲಿ ಪಾಪದ ನಿಜವಾದ ಅವಸ್ಥೆ, ಒಬ್ಬರನ್ನೊಬ್ಬರು ಹಿಂಸಿಸುವುದು ಮುಂತಾದವುಗಳನ್ನು ಗ್ರಹಿಸಬಹುದು; ಅಥವಾ ಕೆಲವು ದೇವದೂತರುಗಳು ನಮ್ಮ ಕರ್ತನಾದ ಯೇಸುಕ್ರಿಸ್ತನು ಮಾಡಿದಂತೆ ತಮ್ಮ ಶ್ರೇಷ್ಠ ಪದವಿಯನ್ನು ಬದಿಗಿರಿಸಿ, ಮಾನವರಾಗಿ ಮರಣ ಸಂಕಟವನ್ನನುಭವಿಸಬಹುದು. ದೇವರು ಈ ಯೋಜನೆಯನ್ನು ಆಯ್ದುಕೊಳ್ಳಲಿಲ್ಲ; ಆತನ ಉದ್ದೇಶದಲ್ಲಿ ಪಾಪ ಮತ್ತು ಅದರ ಸಂಬಳವಾದ ಮರಣವು ಮಾನವ ಜಾತಿಯ ಮೂಲಕ ಉದಾಹರಿಸಬಹುದಾದುದರಿಂದ ಆತನು ನೂತನ ಸೃಷ್ಟಿಯ ಬಾಧ್ಯಸ್ಥರನ್ನು ಮಾನವರಿಂದಲೇ ಆಯ್ದುಕೊಳ್ಳಲು ನಿರ್ಧರಿಸಿದನು. ಈ ರೀತಿಯಲ್ಲಿ ಮಾನವರಲ್ಲಿ ಪ್ರಬಲವಾಗಿರುವ ಮಾನವೀಯತೆ, ಪಾಪ ಮತ್ತು ಮರಣಕ್ಕೆ ಸಂಬಂಧವಾಗಿ "ಪಡೆದಾತನಾದ" ಒಬ್ಬನನ್ನೇ ಪರೀಕ್ಷಿಸುವುದಲ್ಲದೆ ಅದೇ ರೀತಿಯಲ್ಲಿ ಆತನೊಂದಿಗೆ ನೂತನ ಸೃಷ್ಟಿಯ ಸಹ–ಬಾಧ್ಯಸ್ಥರಾಗಿರುವವರೆಲ್ಲರೂ ಅವಕಾಶಗಳನ್ನು, ಅನುಭವಗಳನ್ನು ಮತ್ತು ಪರೀಕ್ಷೆಗಳನ್ನು ಇಷ್ಟಪಡುತ್ತಾರೆ. ಈ ರೀತಿಯಲ್ಲಿ ಒಬ್ಬನೇ ಪಡೆದಾತನಾದ ಯೇಸುವು ಕಾಲಕ್ರಮೇಣ ಕ್ರಿಸ್ತನು, ಅಭಿಷಕ್ತನು ಮುಂದೆ ನೂತನ ಸೃಷ್ಟಿಯ ಇತರೇ ಸದಸ್ಯರುಗಳಿಗೆ ಒಬ್ಬ ಆದರ್ಶನೂ, ಮಾದರಿಯೂ ಆಗುತ್ತಾನೆ. ಇವರೆಲ್ಲರೂ ಮಗನ ಸ್ವಾರೂಪ್ಯವುಳ್ಳವರಾಗುವಂತೆ (ರೋಮಾ. 8:29) ಆತನ ಸ್ವಭಾವದ ಹೋಲಿಕೆಗೆ ಮಾರ್ಪಡಬೇಕಾಗುತ್ತದೆ. ಇತರ ಕಡೆಗಳಲ್ಲಿರುವಂತೆ ಇಲ್ಲಿಯೂ ನಾವು ದೇವರ ಯೋಜನೆಯ ವಿವಿಧ ಲಕ್ಷಣಗಳಲ್ಲಿ ಮಿತವಾದ ಪ್ರದರ್ಶನವನ್ನು ನೋಡುವವರಾಗಿದ್ದೇವೆ. ಪಾಪ ಮತ್ತು ಮರಣದ ವ್ಯವಹಾರವು ಸೃಷ್ಟಿಯ ಒಂದು ವಿಭಾಗದಲ್ಲಿ ಸಾಕಷ್ಟಿದೆ; ಇದು ಮಾನವರಿಗೆ ಒಂದು ದೊಡ್ಡ ಪಾಠ ಮತ್ತು ಪರೀಕ್ಷೆಯಾಗಿ ಮತ್ತು ದೇವದೂತರುಗಳಿಗೆ ಒಂದು ದೊಡ್ಡ ಉದ್ದೇಶಿತ ಪಾಠವಾಗಿ ಕಂಡು ಬರುವುದಲ್ಲದೆ, ನೂತನ ಸೃಷ್ಟಿಯಲ್ಲಿ

ಪಾಲುದಾರರಾಗಲು ಯೋಗ್ಯರೆಂದು ಕಂಡುಬರುವವರೆಲ್ಲರಿಗೂ ಒಂದು ನಿರ್ಣಾಯಕ ಪರೀಕ್ಷೆ ಎಂದು ಎಣಿಸಲ್ಪಡುತ್ತದೆ.

ಹೊಸ ಒಡಂಬಡಿಕೆಯ ಬರಹಗಳಲ್ಲಿ – ಯೇಸುವಿನ ಮತ್ತು ಅಪೋಸ್ತಲರ ಬೋಧನೆಗಳು ನೂತನ ಸೃಷ್ಟಿಜೀವಿಗೆ ಅಥವಾ ಈ ವರ್ಗಕ್ಕೆ ಅವಶ್ಯವಾದ ವಿಶ್ವಾಸ ಮತ್ತು ವಿಧೇಯತೆಯ ಮೆಟ್ಟಿಲುಗಳನ್ನೇರುವ ಚಿಂತನೆಯಲ್ಲಿರುವವರಿಗೆ ಸಂಬೋಧಿಸಲ್ಪಟ್ಟಿವೆ ಎಂಬ ಸತ್ಯವು ಮತ್ತು ದೇವರ ಉದ್ದೇಶವು ಎಲ್ಲಾ ಮಾನವ ಜಾತಿಯ ಬಗ್ಗೆ ಇದೇ ಆಗಿದೆ ಎಂದು ದೇವರ ವಾಕ್ಯಕ್ಕೆ ವ್ಯತಿರಿಕ್ತವಾಗಿ ಊಹಿಸಲು ಕಾರಣವಾಗಿದೆ. ಇದು ಅವರು ಪ್ರಸ್ತುತ ಸುವಾರ್ತಾಯುಗದ ಕರೆಯು ವಿಶೇಷವಾಗಿ "ಉನ್ನತ ಕರೆ' ಅಥವಾ "ಪರಲೋಕದ ಕರೆ'(ಫಿಲಿಪ್ಪಿ 3:14 ಮತ್ತು ಇಬ್ರಿಯ 3:1) ಯಾಗಿದೆ ಎಂಬ ಸತ್ಯವನ್ನು ಕಡೆಗಣಿಸುವಂತೆ ಮಾಡಿದೆ. ದೇವರು ಇಡೀ ಲೋಕಕ್ಕೆ ಒಂದು ರಕ್ಷಣಾ ಯೋಜನೆಯನ್ನು, ಮತ್ತು ಸುವಾರ್ತಾ ಯುಗದ ಸಭೆಗೆ ಒಂದು ರೀತಿಯ ವಿಶೇಷ ಯೋಜನೆಯನ್ನು ಹೊಂದಿದ್ದನು ಮತ್ತು ಈಗಲೂ ಹೊಂದಿದ್ದಾನೆ ಎಂದು ಗ್ರಹಿಸಲು ವಿಫಲವಾಗಿರುವುದು ವಾಖ್ಯನಕಾರರಲ್ಲಿ ಒಂದು ರೀತಿಯ ಗಲಿಬಿಲಿಯನ್ನು ಉಂಟು ಮಾಡಿದೆ. ಇವರು ಆಯ್ದವರ್ಗ ಮತ್ತು ಬಹಳ ದೊಡ್ಡದಾದ ಆಯ್ಕೆಗೊಳ್ಳದ ವರ್ಗ ಹಾಗೂ ಅವರಿಗೆ ಆಯ್ಕೆಗೊಂಡಾತನ ಮೂಲಕ ಸೂಕ್ತ ಸಮಯದಲ್ಲಿ ದೊರೆಯುವ ಆಶೀರ್ವಾದಗಳ ನಡುವೆ ಇರುವ ವ್ಯತ್ಯಾಸವನ್ನು ಗ್ರಹಿಸದವರಾಗಿದ್ದಾರೆ. ಆಯ್ಕೆಯು ಮುಗಿದಕೂಡಲೇ ದೇವರ ಯೋಜನೆಯು ಮುಕ್ತಾಯಗೊಳ್ಳುತ್ತದೆ ಎಂದು ಅವರು ಭಾವಿಸುತ್ತಾರೆ. ಬದಲಾಗಿ ಇದು ಮಾನವ ಸ್ವಭಾವದ ಮತ್ತು ಹೆಚ್ಚಾಗಿ ಈ ಲೋಕಕ್ಕಾಗಿ ವಿನ್ಯಾಸಗೊಳಿಸಿರುವ ರಕ್ಷಣೆಯ ಮೂಲಕ ಪುನರ್‌ಸ್ಥಾಪನೆಯ ಪ್ರಾರಂಭವಾಗಿದೆಯಷ್ಟೆ. ಇದನ್ನು ಸಾಕಷ್ಟು ಜನರು ದೇವರ ಷರತ್ತಿನ ಮೇರೆಗೆ ಪಡಕೊಳ್ಳುವರು.

ಆಲೋಚನೆಗಳ ಅನಿಶ್ಚಿತತೆ, ಈ ಎರಡೂ ರಕ್ಷಣೆಗಳ ನಡುವಣ ವ್ಯತ್ಯಾಸವನ್ನು ತಿಳಿಯಲು ವಿಫಲವಾಗಿರುವುದು – ಈ ಎರಡು ರಕ್ಷಣೆಗಳಿಗೆ ಅನ್ವಯವಾಗುವ ಸಭೆಯು ನೂತನ ಸ್ವಭಾವ ಮತ್ತು ಪ್ರಪಂಚದ ಪುನರ್ ಸ್ಥಾಪನೆಯ ಮೂಲಕ ಮಾನವ ಸ್ವಭಾವದ ಸಂಪೂರ್ಣ ಸಮರ್ಪಕತೆ ಇವುಗಳು ದೇವರವಾಕ್ಯದ ಬೋಧಕರುಗಳನ್ನು ಹೆಚ್ಚಿನ ಕಳವಳಕ್ಕೆ, ಗಲಿಬಿಲಿಗೆ ನಡೆಸಿವೆ. ಹೀಗಾಗಿ ಅವರುಗಳು ರಕ್ಷಣೆಗೊಂಡವರನ್ನು ಒಮ್ಮೆ ಒಂದು ದೃಷ್ಟಿಕೋನದಲ್ಲಿ ಮತ್ತೊಮ್ಮೆ ಇನ್ನೊಂದು ದೃಷ್ಟಿಕೋನದಲ್ಲಿ ನೋಡುತ್ತಾರೆ. ಕೆಲವರು ಅವರನ್ನು ಆತ್ಮೀಕ ಜೀವಿಗಳೆಂದು ತಿಳಿಯುತ್ತಾರೆ ಮತ್ತು ಅವರ ಬಗ್ಗೆ ಹಾಗೆ ಮಾತನಾಡುತ್ತಾರೆ. ಆದಾಗ್ಯೂ ಅವರನ್ನು ಮಹಿಮೆ, ಗೌರವ ಮತ್ತು ನಿರ್ಲಯತ್ವಗಳುಳ್ಳವರೆಂದು ಮಾನವ ಜೀವಿಗಳೊಂದಿಗೆ ದಿಗ್ಭ್ರಮೆಗೊಳಿಸುತ್ತಾರೆ ಮತ್ತು ಅವರು ತಮ್ಮ ಆತ್ಮೀಕ ಸ್ಥಿತಿಯಲ್ಲಿಯೂ ಮಾಂಸ, ಮೂಳೆ ಮುಂತಾದುವುಗಳನ್ನು ಉಳ್ಳವರೆಂದು ಊಹಿಸಿಕೊಳ್ಳುತ್ತಾರೆ. ಮತ್ತೆ ಕೆಲವರು ಮಾನವರ ಪುನರುತ್ಥಾನವನ್ನು ತಮ್ಮ ಅಲೋಚನೆಯ ಕೇಂದ್ರವನ್ನಾಗಿ ಇಟ್ಟುಕೊಂಡು, ಕರ್ತನು ಮತ್ತು ಸಂತರು ಆತ್ಮೀಕ ದೇಹಿಗಳಾಗಿ ವಾಸಮಾಡುವ ಒಂದು ಸುಧಾರಿತ ಪರದೈಸನ್ನು ಕಲ್ಪಿಸಿಕೊಳ್ಳುತ್ತಾರೆ. ಅವರಿಗೆ ಆತ್ಮೀಕ ದೇಹದ ನಿಜವಾದ ಗ್ರಹಿಕೆ ಇಲ್ಲ – ಇಲ್ಲವಾದಲ್ಲಿ, ಒಂದು ಆತ್ಮೀಕ ದೇಹವು ಆತ್ಮೀಕ ಸ್ಥಿತಿಯಲ್ಲಿಯೇ ಸ್ವೀಕಾರವಾದಲ್ಲಿ ಅದು ದೈಹಿಕ ಸ್ಥಿತಿಯನ್ನು ನಿರ್ಬಂಧಗೊಳಿಸುತ್ತದೆ ಎಂಬ ನಿಜವಾದ ಅರ್ಥವನ್ನು ಅವರು ತಿಳಿಯುತ್ತಿದ್ದರು. ಅದರಂತೆ ಮಾನವ ದೇಹವು ಈ ಲೋಕದ ಪರಿಸ್ಥಿತಿ, ಪರಿಸರಕ್ಕಷ್ಟೇ ಅನುಗುಣವಾಗಿದೆ. ಇದನ್ನು ಯಾವುದೇ ಶ್ರೇಣಿಯಲ್ಲಿ ಹಗುರಮಾಡಿದಲ್ಲಿ ಅದು ವಿಕಾರಗೊಳ್ಳುತ್ತದೆ, ಸಮಾನವಾದ ದೇವರ ಉದ್ದೇಶಕ್ಕೆ ಮತ್ತು ಮಾನವ ಸ್ವಭಾವಕ್ಕೆ ಅದು ಸೂಕ್ತವೆನಿಸುವುದಿಲ್ಲ.

ನೂತನ ಸೃಷ್ಟಿಯನ್ನು ಮಾನ್ಯಮಾಡುವುದರ ಮೂಲಕ ಮಾತ್ರವೇ ದೇವರ ಯೋಜನೆಯ ಸೌಂದರ್ಯ ಮತ್ತು ಅನುರೂಪತೆಯನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದು; ಅದರ ನಿರೀಕ್ಷಿತ ಸದಸ್ಯರುಗಳು ಮಾನವ ಸ್ವಭಾವದಿಂದ ಭಿನ್ನವಾಗಿರುವಂತೆ ದೇವರಿಂದ ಕರೆಯಲ್ಪಟ್ಟಿದ್ದಾರೆ; "ಉನ್ನತ ಕರೆ' ಅಥವಾ "**ಪರಲೋಕದ ಕರೆ'** ಇವುಗಳೊಂದಿಗೆ ಅವರ ಸ್ವಂತ ಕರೆ ಮತ್ತು ಆಯ್ಕೆಯ ನಿಶ್ಚಿತತೆ ಇವುಗಳ ಕಾರಣ ಅವರು ತಾವು ಆಯ್ಕೆ ಮಾಡಿಕೊಂಡ ಮಾನವ ಕುಟುಂಬಕ್ಕೆ ಸಂಬಂಧಿಸಿದಂತೆ ದುಪ್ಪಟ್ಟು ಕಾರ್ಯವೆಸಗಬೇಕಾಗುತ್ತದೆ. (1) ಆಯ್ದ ವರ್ಗದ ಕೂಟಗಳಲ್ಲಿ ದೇವರ ಕಾರ್ಯಭಾರಿಗಳಾಗಿ ಸಾಕ್ಷಿಯ ಸಂದೇಶಗಳನ್ನು ನೀಡಬೇಕಾಗುತ್ತದೆ, ಅಭಿಷಕ್ತ ಯಾಜಕವರ್ಗದ ಸದಸ್ಯರಾಗಿ, ಅವರ ವಿಶ್ವಾಸ ಮತ್ತು ಲೋಕದ ಅಂಧತ್ವದ ನಿಮಿತ್ತ ಶ್ರಮೆಯನ್ನೂ ಅನುಭವಿಸಬೇಕಾಗುತ್ತದೆ. (2) ಅವರು ಅವರ ಕರ್ತನಾದ ಕ್ರಿಸ್ತನೊಂದಿಗೆ ದೈವೀಕವಾದ, ರಾಜ ವೈಭವದಿಂದೊಡಗೂಡಿದ ಆತ್ಮೀಕ ಯಾಜಕತ್ವವೊಂದನ್ನು ರಚಿಸಿಕೊಂಡವರಾಗುತ್ತಾರೆ. ಈ ಲೋಕದ ಹಿತ ಮತ್ತು ಎಲ್ಲಾ ಆಗುಹೋಗುಗಳು ಸರಿಪಡಿಸುವಿಕೆಗಾಗಿಯೂ ಮತ್ತು ಜನಾಂಗದ ಪ್ರತಿಯೊಬ್ಬ ವಿಧೇಯ ಸದಸ್ಯನೂ ಉನ್ನತಮಟ್ಟಕ್ಕೆ ಏರಿಸಲ್ಪಡುವುದಕ್ಕಾಗಿಯೂ ಇವರ ವಶಕ್ಕೆ ಒಪ್ಪಿಸಲ್ಪಡುತ್ತವೆ. – ದೇವರು ಮತ್ತು ಮಾನವರ ನಡುವೆ ಮಧ್ಯಸ್ಥಿಕೆ ಮಾಡಿ ದೇವರ ಯೋಜನೆಯಂತೆ ಮಾನವನ ಶಿಕ್ಷಣಕ್ಕಾಗಿ ಮತ್ತು ಸಮಸ್ತವನ್ನೂ ಸರಿಪಡಿಸುವುದಕ್ಕಾಗಿ ನೀತಿಯುಳ್ಳ ರಾಜ್ಯವೊಂದನ್ನು ಸ್ಥಾಪಿಸಬೇಕಾಗುತ್ತದೆ.

ಈ ಲೋಕವನ್ನು ಆಳುವ ಮತ್ತು ಆಶೀರ್ವದಿಸಬೇಕೆನ್ನುವ ದೇವರ ಉದ್ದೇಶಗಳನ್ನು ಬೇರೆ ಯಾವುದೇ ವರ್ಗದ ಜೀವಿಗಳೂ ಇಷ್ಟೊಂದು ಒಳ್ಳೆಯ ರೀತಿಯಲ್ಲಿ ಹೊಂದಿಕೊಳ್ಳದೇ ಇರುವುದನ್ನು ನಾವು ಸಿದ್ಧರಾಗಿ ಕಾಣಬಹುದು. ಮಾನವ ಜೀವಿಗಳೊಂದಿಗೆ ಇತರರಂತೆ "ದೇವರ ರೌದ್ರಕ್ಕೆ ಗುರಿಯಾಗಿರುವ" ಅದಕ್ಕೆ ಹತ್ತಿಕೊಂಡಿರುವ ಸಂಪೂರ್ಣವಾದ ಬಲಹೀನತೆಗಳನ್ನು, ಅಸಮರ್ಪಕತೆಗಳನ್ನು ಮತ್ತು ಮಾನವ ಜನಾಂಗವು ಪಾಪದ ಮೂಲಕ ಹಾಗೂ ಶಾರೀರಿಕ ಬಲಹೀನತೆಗಳ ಮೂಲಕ ಗುರಿಯಾಗಿರುವ ಎಲ್ಲಾ ಸಂಗತಿಗಳನ್ನು ಅವರಿಗೆ ಪರಿಚಯಿಸುತ್ತದೆ. ಇದು ಅವರನ್ನು ಸಂಭಾವಿತ ನೇಮಸ್ತ ಆಡಳಿತಗಾರರನ್ನಾಗಿ, ಕರುಣಾಮಯಿ ಯಾಜಕರನ್ನಾಗಿ ಸಿದ್ಧಪಡಿಸುತ್ತದೆ. ದೈವೀಕ ಸ್ವಭಾವದಲ್ಲಿ ಅವರ ದೈವೀಕ ಸ್ವಭಾವದ ಪರಿಪೂರ್ಣ ಮಟ್ಟವನ್ನು ತಲುಪಿರುವ ಅವರನ್ನು ನಿರಪೇಕ್ಷಣೀಯ ನ್ಯಾಯವಂತರು ಮತ್ತು ಈ ಲೋಕದ ನ್ಯಾಯತೀರ್ವಿಕೆಯ ದಿನದಲ್ಲಿ ನ್ಯಾಯಾಧೀಶರಾಗಿ

ಅವರ ಎಲ್ಲಾ ನಿರ್ಣಯಗಳಲ್ಲಿ ಪ್ರೀತಿಯುಳ್ಳವರೂ ಆಗಿ ಕಂಡುಬರುವಂತೆ ಅವರನ್ನು ಗುಣಯೋಗ್ಯರನ್ನಾಗಿ ಮಾಡುತ್ತದೆ.

* ಸಂಪುಟ-1 ಅಧ್ಯಾಯ viii ರಲ್ಲಿರುವ "ನ್ಯಾಯ ತೀರ್ವಿಕೆಯ ದಿನ" ವನ್ನು ಓದಿರಿ

ಆದರೆ, ಉದ್ಧಾರಮಾಡುವ, ಆಡಳಿತ ನಡೆಸುವ, ಆಶೀರ್ವದಿಸುವ ಮತ್ತು ಈ ಲೋಕದ ಮಾನವ ಕುಲಕ್ಕೆ ಮತ್ತು ಪತನಗೊಂಡ ದೇವದೂತರುಗಳಿಗೆ ನ್ಯಾಯನಿರ್ಣಯಿಸುವ ಈ ಮಹಾ ಕಾರ್ಯವು ಒಂದು ವಿಶೇಷ ಕಾರ್ಯವಾಗಿ ದೈವ ಸ್ವಭಾವದ ಈ ನೂತನ ಸೃಷ್ಟಿಗಳಿಗೆ ಒಪ್ಪಿಸಲ್ಪಡುವುದು. ವಿಶ್ವದ ಬೇರೆ ಯಾವ ಜೀವಿಯೂ ಈ ಕೆಲಸವನ್ನು ಮಾಡಲು ಇಷ್ಟೊಂದು ಒಳ್ಳೇ ರೀತಿಯಲ್ಲಿ ಸಿದ್ಧತೆ ಮಾಡದಿರುವಾಗ ಇವರು ದೇವರ ಮಾರ್ಗದರ್ಶನದಲ್ಲಿ ವಿಶೇಷ ರೀತಿಯಲ್ಲಿ ತರಬೇತು ಹೊಂದಿದ್ದಾರೆ ಮತ್ತು ಸಿದ್ದತೆ ಪಡೆದಿದ್ದಾರೆ. ಆದಾಗ್ಯೂ, ಇದು ಯಾವುದೇ ರೀತಿಯಲ್ಲಿ ಅವರ ಪೂರ್ಣವಾದ ಸೇವೆ ಅಥವಾ ಕಾರ್ಯವೇನೂ ಅಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಸಹಸ್ರ ವರ್ಷದ ಯುಗಾಂತರ ಆಳ್ವಿಕೆಯು ಈ ನೂತನ ಸೃಷ್ಟಿಗಳ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳ ಪ್ರಯೋಗದ ಆರಂಭವಾಗಿದೆ. ಇದರ ಅಂತ್ಯದಲ್ಲಿ ಈ ರಾಜ್ಯವು ತಂದೆಯಾದ ದೇವರಿಗೆ ಮತ್ತು ದೇವರ ಮಹಿಮಾ ಕಾರ್ಯಭಾರಿಗಳಾದ ಮಾನವರಿಗೆ ಈ ಲೋಕವನ್ನು ಆಳುವಂತೆ ಒಪ್ಪಿಸಲ್ಪಡುವಾಗ, ಅದು ಅವರ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳನ್ನು ಪ್ರಯೋಗಿಸಲು ಇನ್ನೂ ವಿಶಾಲವಾದ ಕಾರ್ಯಕ್ಷೇತ್ರವಾಗಿ ನೂತನ ಸೃಷ್ಟಿಯ ಮುಂದೆ ತೆರೆಯಲ್ಪಡುತ್ತದೆ; ದೇವರು ತನ್ನ ಮಗನನ್ನು ತನ್ನ ಸ್ವಂತ ದೈವಿಕ ಸ್ವಭಾವದ ಪಾಲುದಾರನನ್ನಾಗಿ ಮಾತ್ರವಲ್ಲದೆ ಆತನ ಸಿಂಹಾಸನದಲ್ಲಿಯೂ ಎಂದು ಬರೆಯಲ್ಪಟ್ಟಿದೆಯಲ್ಲದೆ- ಮಗನು ತಂದೆಯೊಡನೆ ಸಿಂಹಾಸನದಲ್ಲಿ ಕುಳಿತು ಕೊಳ್ಳುವನಲ್ಲವೆ? (ಪ್ರಕ.3:21). ಆತನು ಸಹಸ್ರವರ್ಷದ ಯುಗದಲ್ಲಿ ಭೂಲೋಕದ ಆಡಳಿತವನ್ನು ವಹಿಸಿಕೊಳ್ಳುವಿಕೆ ಮತ್ತು ಅದರ ಪ್ರಭುತ್ವದ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಈ ಅಧಿಕಾರ ಸ್ಥಾನವನ್ನು ಒಂದು ಅರ್ಥದಲ್ಲಿ ಬಿಟ್ಟುಕೊಡುವನಾದರೂ, ಅದು ಖಂಡಿತವಾಗಿಯೂ ಪೂರ್ಣ ಅರ್ಥದಲ್ಲಿ ದೇವರು ಆತನಿಗೆ ಒಪ್ಪಿಸಿಕೊಟ್ಟ ಕಾರ್ಯವನ್ನು ಪೂರೈಸುವವರೆಗೆ ಆತನು ತನ್ನನೇ ಸಮರ್ಪಿಸಿಕೊಂಡು, ನಮ್ಮ ಪಾಪಗಳ ದಂಡ ತೆತ್ತು ಪರಲೋಕಕ್ಕೆ ಏರಿಹೋಗುವವರೆಗೆ ಆತನು ಕಡಿಮೆ ಮಹಿಮೆಯುಳ್ಳವನು, ಕಡಿಮೆ ಸ್ಥಾನವನ್ನು ಅಲಂಕರಿಸಿದ್ದಾನೆ ಎಂಬುದಲ್ಲ.

ಭವಿಷ್ಯದಲ್ಲಿ ತಂದೆಯು ತನ್ನ ಏಕೈಕ ಪುತ್ರನಾದ ಪ್ರೀತಿಯ ಮಗನಿಗೆ ಯಾವ ಮಹಾ ಕಾರ್ಯಗಳನ್ನು ತನ್ನ ದೃಷ್ಟಿಯಲ್ಲಿರಿಸಿಕೊಂಡಿದ್ದಾನೆಂಬುದು ನಮಗೆ ತಿಳಿಯದು. ಆತನನ್ನು ದೇವರು ಎಲ್ಲವುಗಳ ವಾರಸುದಾರನನ್ನಾಗಿ ನಿಯುಕ್ತಿಗೊಳಿಸಿದ್ದಾನೆ. ಆದರೆ ನಾವು ನಮ್ಮ ಒಡೆಯನ ಸ್ವಂತ ತುಟಿಗಳ ಮಾತನ್ನು ಬಲ್ಲವರಾಗಿದ್ದೇವೆ. ನಮಗೆ ಆತನ ಮೂಲಕ ಕೊಡಲ್ಪಟ್ಟ ವಾಗ್ದಾನವೇನೆಂದರೆ, ನಾವು ಮಹಿಮೆಹೊಂದುವಾಗ ನಾವು ಆತನಂತೆಯೇ ಆಗುತ್ತೇವೆ ಮತ್ತು ಆತನನ್ನು ಇದ್ದಂತೆಯೇ ನೋಡುತ್ತೇವೆ ಮತ್ತು ಆತನ ಮಹಿಮೆಯಲ್ಲಿ ಪಾಲುಗಾರರಾಗುತ್ತೇವೆ ಮತ್ತು ಆತನ ಸ್ವಭಾವವನ್ನೂ ಹಂಚಿಕೊಳ್ಳುತ್ತೇವೆ, ಈ ಬರೆದಿರುವ ದೇವರ ಮಾತುಗಳು ನಮ್ಮನ್ನು ಸಾಗಿಸುತ್ತಿರುವವರೆಗೆ ದೇವರ ಯೋಜನೆಯ ಬೆಳಕಿನಲ್ಲಿ ನಿಸರ್ಗ ಗ್ರಂಥವನ್ನು ನೋಡುವುದು, ದೇವರ ವಾಕ್ಯವನ್ನು ದುರ್ಬಿನಾಗಿ ಬಳಸಿಕೊಂಡು ನಮ್ಮ ಸುತ್ತಲೂ ಇರುವ ಗ್ರಹಗಳು, ಪ್ರಪಂಚಗಳು ವ್ಯರ್ಥವಾಗಿ ಮಾಡಲ್ಪಟ್ಟಿಲ್ಲ ಎಂದು ಗ್ರಹಿಸುವುದು ದೈವದ್ರೋಹವೆನಿಸದು. ಒಂದಲ್ಲಾ ಒಂದು ಸಮಯದಲ್ಲಿ ಇವುಗಳಲ್ಲಿ ದೇವರ ಕಾರ್ಯಗಳು ನಡೆಯಲಿವೆ. ಅಂತಹ ಸಮಯದಲ್ಲಿ, ಎಲ್ಲಾ ಸಂಗತಿಗಳಲ್ಲಿ ಪೂರ್ವಶ್ರೇಷ್ಠತೆ ಉಳ್ಳಾತನು ತನ್ನ ಪೂರ್ವ ಶ್ರೇಷ್ಠತೆಯನ್ನು ಮುಂದುವರಿಸುತ್ತಾನೆ ಮತ್ತು ದೈವಿಕಶಕ್ತಿಯುಳ್ಳ ಎಲ್ಲಾ ದಿಕ್ಕುಗಳಲ್ಲಿ ಇನ್ನೂ ಮುಖ್ಯಸ್ಥನಾಗಿರುತ್ತಾನೆ ನಮ್ಮ ಪ್ರಪಂಚದಲ್ಲಿ ಉಂಟಾದ ಪಾಪದ ಅನುಭವವು ಇತರ ಗ್ರಹಗಳಲ್ಲಿಯೂ ಪುನರಾವರ್ತನೆಯಾಗ ಬಹುದೆಂದು ನಾವು ನಿರೀಕ್ಷಿಸುವಂತಿಲ್ಲ. ಇದರ ಬದಲಾಗಿ ಈ ಒಂದೇ "ಮಿತಿಮೀರಿದ ಪಾಪದ ಪ್ರದರ್ಶನವು" ಮತ್ತು ಅದರ ಘೋರವಾದ ಪರಿಣಾಮವು ಇತರೇ ಪ್ರಪಂಚಗಳಲ್ಲಿ ಇನ್ನೂ ಆತನ ಸ್ವರೂಪದಲ್ಲಿ ಸೃಷ್ಟಿಸಲ್ಪಡಲಿರುವ ಎಲ್ಲಾ ಜೀವಿಗಳಿಗೂ ಶಾಶ್ವತವಾದ ಪಾಠವಾಗಿ ದೇವರಿಂದ ಉಪಯೋಗಿಸ ಲ್ಪಡುತ್ತದೆಂದು ನಾವು ದೃಢವಾದ ಭರವಸೆಯಿಂದಿರಬಹುದು. ಅವರುಗಳು ಇದನ್ನು ಅನುಭವದಿಂದಲ್ಲ, ಗಮನಿಸು ವುದರಿಂದಲೇ ಕಲಿತು ಕೊಳ್ಳಲಿದ್ದಾರೆ.

ಸೈತಾನನು, ಆತನ ಎಲ್ಲಾ ದೂತರೂ, ಎಲ್ಲಾ ದುಷ್ಟ ಹಾಗೂ ನಾಶಪಡಿಸುವ ಶಕ್ತಿಗಳು ಇವುಗಳೊಡಗೂಡಿ ನಿರ್ನಾಮವಾಗಿರಲಾಗಿ - ಮಹಿಮೆಯುಳ್ಳ ದಿವ್ಯ ಸಭೆಯವರು ತಮ್ಮ ಜ್ಞಾನಾನುಭವದಲ್ಲಿ ಬೇರೊಂದು ಲೋಕದ ಈ ಸಮರ್ಪಕ ಜೀವಿಗಳ ಬಗ್ಗೆ ಸೂಚನೆ ನೀಡಬಲ್ಲವುದಾದರೆ - ಬಹುಶಃ ಈ ಲೋಕದಿಂದ ಆಯ್ದುಕೊಂಡ, ಪಾಪದ ಬಗ್ಗೆ ತಿಳುವಳಿಕೆ ಮತ್ತು ಅನುಭವವುಳ್ಳ ಶಿಕ್ಷಕರುಗಳು ದೇವರ ಮೇಲೆತ್ತುವಿಕೆ ಮತ್ತು ಆಶೀರ್ವಾದಗಳೊಂದಿಗೆ ತಪ್ಪು ಒಪ್ಪುಗಳ ಮತ್ತು ಅವುಗಳ ಬಹುಮಾನದ ಬಗ್ಗೆ ತಿಳಿಸುವುದು ಎಷ್ಟೊಂದು ವಿವೇಕ ಪೂರ್ಣ! ಅವರ ಶಿಕ್ಷಕರುಗಳು ಮಾನವ ಜಾತಿಯ ಮಹಾ ಮೋಸಗಾರನಾದ ಸೈತಾನನ ಮಹಾ ದಂಗೆಯ ವಿವರಗಳನ್ನು; ಮಾನವನ ಅಧಃಪತನ, ಆತನು ಪಾಪ ಮತ್ತು ವಿಪತ್ತಿಗೆ ಒಳಗಾದದ್ದು, ಅವುಗಳಿಂದ ವಿಮೋಚನೆ, ವಿಮೋಚಕ ಮತ್ತು ಆತನ ಜೊತೆ ವಾರಸುದಾರರಿಗೆ ದೊರೆಯಲಿರುವ ಬಹು ದೊಡ್ಡ ಬಹುಮಾನ, ಮಾನವರಿಗೆ ನೀಡಲ್ಪಟ್ಟ ಆಶೀರ್ವಾದದಾಯಕ ಪ್ರತಿದಾನ ಇವುಗಳ ಬಗ್ಗೆ ತಿಳಿಸಲು ಶಕ್ತರಾಗಿದ್ದಾರೆ. ಇವುಗಳೆಲ್ಲವೂ ದೇವರ ಸಮಸ್ತ ಸೃಷ್ಟಿಗೆ ಎಲ್ಲಾ ಕಾಲಕ್ಕೂ ಪಾಠಗಳು ಮತ್ತು ಉದಾಹರಣೆಗಳು. ಈ ಸೂಚನೆಗಳು ಪಾಪವನ್ನು ನಿಗ್ರಹಿಸಲು ಶಕ್ತವಾಗಿವೆ ಮತ್ತು ದೇವರ ಪ್ರೀತಿಯ ನಿಬಂಧನೆಯ ಮೇರೆಗೆ ನಡತೆಯನ್ನು ಉತ್ತಮಪಡಿಸಿಕೊಳ್ಳಲು ಅಗತ್ಯವಾದ ಬೋಧನೆಗಳಾಗಿವೆ.

ಇಂದಿನ ಕಾಲದಲ್ಲಿ ಈ ನೂತನ ಸೃಷ್ಟಿಯ ಕಾರ್ಯಗಳು, ಈಗಾಗಲೇ ತಿಳಿಸಿರುವಂತೆ ದುಪ್ಪಟ್ಟಾದುದು. ಅವರು ಪವಿತ್ರಾತ್ಮ ನಿಂದ ಜನಿಸಿ ಯಾಜಕರಾಗಿ ನೇಮಿಸಲ್ಪಡುತ್ತಾರೆ.* (ದೇವದರ್ಶನ ಗುಡಾರ-ಕನ್ನಡ ಪುಸ್ತಕದ ಪುಟ 20 ರಿಂದ 23ರವರೆಗೆ ಓದಿರಿ) ಆದರೆ ಅವರ ಮನಸ್ಸುಗಳು ಮಾತ್ರ

ಪವಿತ್ರಾತ್ಮನಿಂದ ಜನಿಸಿರುವಂತದ್ದು ಮತ್ತು ಅವರ ದೇಹಗಳು ಈ ಭೂಲೋಕಸಂಬಂಧವಾದವು. ಆದುದರಿಂದ ಅಪೋಸ್ತಲನಾದ ಪೌಲನು ಹೇಳುವುದೇನೆಂದರೆ "ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲ ವೆಂದು ತೋರುವುದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು" (2ಕೊರಿ. 4:7). ಹೊಸದಾಗಿ ಪಡೆದಿರುವ ಮನಸ್ಸು ಅಥವಾ ಇಚ್ಛೆಯು ಅಲ್ಲಿದ್ದು ಅವುಗಳು ನೂತನ ಸೃಷ್ಟಿಯನ್ನು ಪ್ರತಿನಿಧಿಸುತ್ತವೆ, ಇವುಗಳೆಲ್ಲವೂ ಪ್ರಥಮ ಪುನರುತ್ಥಾನದವರೆಗೆ ಅಲ್ಲಿದ್ದು ನೂತನವಾದ ಗುಣ ಸ್ವಭಾವದಲ್ಲಿ ಬೆಳೆದುಬರುತ್ತದೆ ಮತ್ತು ಅದಕ್ಕೆ ಸೂಕ್ತವಾದ ಶರೀರವೊಂದು ಒದಗುತ್ತದೆ. ಇದು ಪರಲೋಕದ ಶರೀರವಾಗಿದ್ದು ಆತ್ಮೀಕವೂ, ಸಂಪೂರ್ಣವೂ ಮತ್ತು ಸಮರ್ಪಕವೂ ಆಗಿದ್ದು ದೇವರ ಚಿತ್ತಕ್ಕೆ ನಿರಪೇಕ್ಷವಾದ ಐಕ್ಯತೆ ಹೊಂದಿರುತ್ತದೆ. ಅದೇ ಸಮಯದಲ್ಲಿ ನಮ್ಮ ಮನಸ್ಸಿನಲ್ಲಿ ಕಾರ್ಯವೆಸಗುವ ದೈವಿಕ ಶಕ್ತಿ, ಪವಿತ್ರಾತ್ಮ ಇವುಗಳು ನಮ್ಮನ್ನು "ನೂತನ ಸೃಷ್ಟಿ' ಗಳನ್ನಾಗಿಯೂ ಮತ್ತು ಯಾಜಕರುಗಳನ್ನಾಗಿ ಸ್ಥಾಪಿಸಿ ಮತ್ತು ನಮ್ಮ ಸ್ವಾಭಾವಿಕ ಮಾನವ ಆಸೆ, ಆಕಾಂಕ್ಷೆ ಮುಂತಾದುವುಗಳೆಡೆಗೆ ಗಮನಹರಿಸಿ ನಮ್ಮನ್ನು ನಾವು ಸಮರ್ಪಣೆ ಮಾಡಿಕೊಳ್ಳುವ ದಿಕ್ಕಿನಲ್ಲಿ ಕೊಂಡೊಯ್ಯುತ್ತದೆ. ಯಾಕೆಂದರೆ ದೇವರು "ನೂತನ ಸೃಷ್ಟಿ'ಗೆ ಒದಗಿಸಿರುವ ಆಕಾಂಕ್ಷೆ ಮತ್ತು ಆಸಕ್ತಿಗಳಲ್ಲಿ ಯಾವುದೇ ಪ್ರಮಾಣದಲ್ಲಿ ಇವುಗಳು ಅಡ್ಡಿಪಡಿಸುವುದಾದರೆ ಅವುಗಳನ್ನು ತ್ಯಾಗ ಮಾಡಬೇಕಾಗುತ್ತದೆ. ಈ ರೀತಿಯಲ್ಲಿ ನೂತನ ಸೃಷ್ಟಿಯ ವಿಜಯವು ಆತನು ತನ್ನ ಮಾನವ ಸ್ವಭಾವವನ್ನು ಬಲಿಕೊಡಬೇಕಾಗಿ ಬಂತು. ಕ್ರಿಸ್ತನ ಈ ವಿಜಯವು ದೇವರನ್ನು ಮಹಿಮೆಪಡಿಸುತ್ತದೆ ತಾನು ಮಹಿಮೆ ಹೊಂದಿಕೊಳ್ಳದಂತೆ ಮತ್ತು ಯಾವ ಬಲಿದಾನವೂ ಅಗತ್ಯವಿಲ್ಲದ ರೀತಿಯಲ್ಲಿ ಆತನ ಶಕ್ತಿಯು ಆತನ ಎಲ್ಲಾ ಅಗತ್ಯತೆಗಳಿಗೆ ತಕ್ಕಂತೆ ನಮ್ಮ ಎಲ್ಲಾ ಸ್ವಾಭಾವಿಕ ಪರಿಸ್ಥಿತಿಗಳಲ್ಲಿಯೂ ಇದ್ದು, ಆತನ ಚಿತ್ತಾನುಸಾರ ನಮ್ಮಲ್ಲಿ ಆತನ ವಾಗ್ದಾನಗಳ ಮೂಲಕ ಕಾರ್ಯವೆಸಗುವಂತೆ ಮಾಡುತ್ತದೆ. ಆದರೆ "ಹೊಸ ಸೃಷ್ಟಿ'ಯ ವಿಶ್ವಾಸ, ಪ್ರತಿಷ್ಠೆ ಮತ್ತು ಬಲಿದಾನಗಳು ಈ ಪ್ರಸ್ತುತ ಜೀವನದಲ್ಲಿ ಆರೋನನ ಯಾಜಕತ್ವ ಮತ್ತು ಇಸ್ರಾಯೇಲ್ಯರ ಸಾಂಕೇತಿಕ ಬಲಿದಾನಗಳಿಗೆ ಉತ್ತರ ನೀಡುವುದಾಗಿದೆ. ಈ ರೀತಿಯಾಗಿ ಅಪೋಸ್ತಲನು ನೂತನ ಸೃಷ್ಟಿಯ ಮುಂಬರುವ ಯಾಜಕತ್ವವು ಮೆಲ್ಕಿಜೆದೇಕನ ಮಹಿಮೆಯುಳ್ಳ ಯಾಜಕತ್ವವನ್ನು ಪ್ರತಿನಿಧಿಸುತ್ತದೆಂದು ಸೂಚಿಸುತ್ತಾನೆ.

ಮೆಲ್ಕಿಜೆದೇಕನು ನಾರುಮಡಿಯನ್ನುಟ್ಟು ಯಜ್ಞ ಬಲಿಗಳನ್ನು ಅರ್ಪಿಸಿದ ಒಬ್ಬ ಯಾಜಕನಾಗಿರಲಿಲ್ಲ. ಆತನು ಒಬ್ಬ ಯಾಜಕ, ಅದೇ ಸಮಯದಲ್ಲಿ ಒಬ್ಬ ರಾಜನೂ ಆಗಿದ್ದವನು. – "ಸಿಂಹಾಸನಾರೂಢನಾಗಿದ್ದ ಯಾಜಕ". ಈ ಕಾರಣದಿಂದ ಒಂದು ರೀತಿಯಲ್ಲಿ ಆತನ ಸ್ಥಾನವು ಆರೋನನಿಗಿಂತ ಉನ್ನತವಾದದ್ದಾಗಿತ್ತು. ಆರೋನನು ಅಬ್ರಹಾಮನ ಮಗನಾಗಿದ್ದನು. ಅಬ್ರಹಾಮನು ಎಷ್ಟೇ ಹಿರಿಯ ವ್ಯಕ್ತಿಯಾಗಿದ್ದರೂ ಮೆಲ್ಕಿಜೆದೇಕನಿಗೆ ಕಾಣಿಕೆಗಳನ್ನು ಸಲ್ಲಿಸಿ ಆತನ ಆಶೀರ್ವಾದವನ್ನು ಪಡೆದನು, ಅಪೊಸ್ತಲನು ವಿವರಿಸುವಂತೆ ಯಾಜಕತ್ವದಲ್ಲಿ ಬಲಿದಾನವು ಮಹಿಮೆ ಮತ್ತು ಗೌರವಗಳನ್ನೊಳಗೊಂಡ ರಾಜತ್ವದ ಮೇಲಣ ಯಾಜಕತ್ವಕ್ಕಿಂತ ಕೆಳಗಣ ಯಾಜಕತ್ವ ಅಥವಾ ಪರಿಸ್ಥಿತಿಯನ್ನು ಸೂಚಿಸುತ್ತದೆ. ಈ ನೂತನ ಸೃಷ್ಟಿಗಳು ಸಾವಿರ ವರ್ಷ ರಾಜ್ಯದ (ಕ್ರಿಸ್ತನು ಇದರ ಶಿರಸ್ಸು, ಅವರು ಆತನ ದೇಹದ ಸದಸ್ಯರೆಂದು ಎಣಿಸಲ್ಪಟ್ಟವರು) ವೈಭವಯುತ ಕಾರ್ಯದಲ್ಲಿ ಮೆಲ್ಕಿಜೆದೇಕನ ತರಹದವರಾಗಿ ಸೂಚಿಸಲ್ಪಟ್ಟಿದ್ದಾರೆ. ಇವುಗಳಿಂದ, ಕಾರ್ಯದ ಸಮರ್ಪಣಾ ಲಕ್ಷಣವು ಅಂತ್ಯವನ್ನು ತಲುಪುತ್ತದೆ, ರಾಜ್ಯಭಾರ, ಆಡಳಿತ, ಆಶೀರ್ವಾದಗಳು, ಸಹಕಾರಗಳೆಲ್ಲವೂ ಪ್ರಾರಂಭಗೊಳ್ಳುತ್ತವೆ ಮತ್ತು ಇವುಗಳು ದೇವರ ಯೋಜನೆಯನ್ನು ಪೂರೈಸಲು ಸಂಪೂರ್ಣವಾಗಿ ಶಕ್ತವಾಗಿವೆ. ಅದ್ಯಾವುದೆಂದರೆ, "ಲೋಕದ ಎಲ್ಲಾ ಕುಟುಂಬಗಳೂ ಆಶೀರ್ವಾದ ಹೊಂದುತ್ತವೆ "ಮತ್ತು ಯಾರ್ಯಾರು ಸೃಷ್ಟಿಕರ್ತನ ಸಂಪೂರ್ಣ ಸಾಮರಸ್ಯಕ್ಕೂ ಹಾಗೂ ಆತನ ನಿಬಂಧನೆಗಳಿಗೆ ಒಳಪಡಲು ಇಚ್ಛಿಸುತ್ತಾರೋ ಅವರು ದೇವರ ಆಶೀರ್ವಾದವನ್ನು ಹೊಂದುತ್ತಾರೆ. – (ಆದಿ. 22 :18 ; ಗಲಾತ್ಯ 3: 16, 29 )

ದೇವರು ತನ್ನ ಮತ್ತು ತನ್ನ ಒಬ್ಬನೇ ಕುಮಾರನಾದ ರಕ್ಷಕನ ಹಾಗೂ "ನೂತನ ಸೃಷ್ಟಿ" ಯಾಗುವಂತೆ ಸಿದ್ಧಪಡಿಸಲು ತಾನಾಯ್ದುಕೊಂಡ ಸಭೆಯ ನಡುವಣ ಸಂಬಂಧವನ್ನು ಪ್ರತಿನಿಧಿಸುವಂತೆ ಹೇಳುವ ಎಲ್ಲಾ ಚಿತ್ರಣಗಳು ಆತನೊಂದಿಗೆ ದೈವಿಕ ಸ್ವಭಾವದಲ್ಲಿ ಸಂಯೋಜಿಸಲ್ಪಟ್ಟವುಗಳಾಗಿದ್ದು ಅವರುಗಳ ಮಧ್ಯೆ ಇರುವ ಆಪ್ತತೆ, ನಿಕಟತೆ ಮತ್ತು ಏಕತೆಯನ್ನು ಎತ್ತಿತೋರಿಸುವುದಾಗಿದೆ. ದೇವರು ತಾನು ಸೃಷ್ಟಿಸಿದ ದೀನ ಮನಸ್ಸಿನ ಮನುಷ್ಯ ಜೀವಿಗಳು ಅವರ ಬಗ್ಗೆ ಸೃಷ್ಟಿಕರ್ತನ ಮೇರೆಯಿಲ್ಲದ ಆಸಕ್ತಿ ಮತ್ತು ಪ್ರೀತಿಯ ನಿಮಿತ್ತ ವಿಶ್ವಾಸದಲ್ಲಿ ಹೊಯ್ದಾಡುವರೆಂದು ಕರ್ತನು ಗ್ರಹಿಸಿದ್ದನಾದರೂ ಅವರನ್ನು ತನ್ನ ಸೃಷ್ಟಿಯಲ್ಲಿ ತನ್ನ ಮತ್ತು ತನ್ನ ಮಗನ ನಂತರದ ಅತಿ ಎತ್ತರದ ಸ್ಥಾನಕ್ಕೆ ಕರೆಯಲ್ಪಟ್ಟಿರುವ ಇವರ ಪ್ರಸ್ತಾಪವು ಅನೇಕ ಸಾರಿ ನಾನಾವಿಧವಾಗಿ ಮತ್ತು ವಿವಿಧ ಚಿತ್ರಣಗಳಲ್ಲಿ ಮೂಡಿ ಬರುವುದನ್ನು ನಾವು ಕಾಣಬಹುದಾಗಿದೆ. ಇದು ಆತನ ಪ್ರಾಮಾಣಿಕತೆಯ ಬಗ್ಗೆ ನಮ್ಮ ಎಲ್ಲಾ ಪ್ರಶ್ನೆಗಳನ್ನೂ, ಅನುಮಾನಗಳನ್ನೂ, ಅಂಜಿಕೆಗಳನ್ನೂ ಸ್ತಬ್ಧಗೊಳಿಸುವುದಾಗಿದ್ದು ಈ "ಮೇಲಣ ಕರೆ"ಯ ಯಥಾರ್ಥತೆಯನ್ನು ಗೌರವಿಸುವಂತೆ ಮಾಡಿದೆ. ನಾವು ಇವುಗಳಲ್ಲಿ ಕೆಲವನ್ನು ಗೌರವಿಸುವುದರ ಮೂಲಕ ನಮ್ಮ ಮನಸ್ಸುಗಳನ್ನು ಉಲ್ಲಾಸಗೊಳಿಸು ವವರಾಗಿದ್ದೇವೆ : ಒಂದರಲ್ಲಿ ನಮ್ಮ ಕರ್ತನು ಪಿರಮಿಡ್ಡಿನ ಮೂಲೆಗಲ್ಲಾಗಿ ಮತ್ತು ಆಯ್ದ ಸಭೆಯು ಆತನ ಬಳಿಗೆ ಸೆಳೆಯಲ್ಪಟ್ಟ, ರೂಪಗೊಂಡ ಮತ್ತು ಆತನ ಲಕ್ಷಣಾ ರೇಖೆಯೊಂದಿಗೆ ಸಾಮರಸ್ಯ ಹೊಂದಿದ ಜೀವವುಳ್ಳ ಕಲ್ಲುಗಳಾಗಿ, ಅವುಗಳು ಆತನೊಂದಿಗೆ ದೇವರು ಈ ಸುವರ್ತಾಯುಗದಲ್ಲಿ ಸ್ಥಾಪಿಸಲಿರುವ ಮಹಾ ಪಿರಮಿಡ್ ರಚನೆಯ ಸದಸ್ಯರಾಗುವೋಪಾದಿಯಲ್ಲಿ ಪ್ರತಿನಿಧಿಸಲ್ಪಟ್ಟಿವೆ. ಇದು ಮುಂಬರುವ ಕಾಲದಲ್ಲಿ ಈ ಲೋಕವನ್ನು ಆಶೀರ್ವದಿಸು ವುದಾಗಿದ್ದು ಮತ್ತು ಇದರ ಮೂಲಕವಾಗಿ ಶಾಶ್ವತವಾಗಿ ಆತನು ಮಹಿಮೆ ಹೊಂದಲಿದ್ದಾನೆ.

ಈ ಪಿರಮಿಡ್ಡಿನ ಚಿತ್ರವು ದೇವಾಲಯದ ಚಿತ್ರಕ್ಕೆ ನಿಕಟ ಸಂಬಂಧವನ್ನು ಹೊಂದಿದೆ. ಸೊಲೊಮೋನನು ಕಟ್ಟಿಸಿದ ದೇವಾಲಯವು ದೇವರು ಕಟ್ಟಲಿರುವ ಇನ್ನೂ ಹೆಚ್ಚಿನ ಜ್ಞಾನವುಳ್ಳ ಆತ್ಮೀಕ ದೇವಾಲಯದ ಸಾಂಕೇತಿಕವಾಗಿದೆಯೆಂದು ನಮಗೆ ನಿಶ್ಚಯವಾಗಿದೆ (1 ಪೇತ್ರ 2:5 ). ಪ್ರತಿಯೊಂದು ತೊಲೆಯೂ

ಮತ್ತು ಪ್ರತಿ ಕಲ್ಲೂ ಅದರ ಸ್ಥಳಕ್ಕಾಗಿ ಗುರುತುಮಾಡಲ್ಪಟ್ಟಿದ್ದು ಆದಕ್ಕೆ ಜೋಡಣೆಯಾಗುವಂತೆ ಕೆತ್ತಲ್ಪಟ್ಟಿದೆಯೆಂದು ನಮಗೆ ತೋರಿಸಲಾಗಿದೆ. ಅದರಂತೆ ನೂತನ ಸೃಷ್ಟಿಯ ಸಭೆಯಲ್ಲಿಯೂ ಅದರ ಪ್ರತಿಯೊಬ್ಬ ಸದಸ್ಯನೂ ತನ್ನ ತನ್ನ ಸ್ಥಳಕ್ಕೆ ಹೊಂದಿಕೊಳ್ಳುವಂತೆ ಸಿದ್ಧಪಡಿಸಲ್ಪಡುವವನಾಗಿದ್ದಾನೆ. ಈ ಆದರ್ಶಭೂತ ವಾದ ದೇವಾಲಯವು "ಉಳಿಸುತ್ತಿಗೆಯ ಸದ್ದಿಲ್ಲದೆ" ಕರ್ಕಶ ಸದ್ದುಗದ್ದಲವಿಲ್ಲದೆ ದೈವ ವಾಸ್ತುಶಿಲ್ಪಿಯ ಮೂಲಕ ಕಟ್ಟಲ್ಪಡುವಂತೆ ಅನುಮತಿ ಪಡೆದಿದ್ದು, ಈ ಸುವಾರ್ತಾಯುಗದ ಅಂತ್ಯದಲ್ಲಿ ನೂತನ ಸೃಷ್ಟಿಯು ಸಂಪೂರ್ಣಗೊಳ್ಳುವುದರೊಂದಿಗೆ ಈ ಸಭೆಯೂ ಸಂಪೂರ್ಣಗೊಳ್ಳುವುದು. ಇದು ಸಹಾ ಅದರ ಶಿರಸ್ಸಾಗಿರುವ ಈ ಯುಗದ ಆದಿಯಲ್ಲಿಯೇ ಸತ್ತವರಲ್ಲಿ ಮೊದಲಿಗೆ ಪುನರುತ್ಥಾನ ಹೊಂದಿದ ಕರ್ತನಂತೆ ಸತ್ತವರೊಳಗಿಂದ ಎದ್ದುಬರುವುದಾಗಿದೆ ( 1 ಅರಸು 6 : 7 ).

ನಾವು ನೆನಪಿನಲ್ಲಿಡಬಹುದಾದ ಮತ್ತೊಂದು ಚಿತ್ರಣವೆಂದರೆ, ಅನೇಕ ಸದಸ್ಯರುಗಳುಳ್ಳ ಮಾನವ ದೇಹದ ಬಗ್ಗೆ, ಅಪೋಸ್ತಲನಾದ ಪೌಲನು ಬಹು ಸ್ಪಷ್ಟವಾಗಿ ಮತ್ತು ವೈಶಿಷ್ಟ್ಯಪೂರ್ಣವಾಗಿ ಕರ್ತನ ದೇಹವೆಂಬ ಸಭೆಯ ಹಾಗೂ ಅದರ ಶಿರಸ್ಸಾಗಿರುವ ಕರ್ತನ ನಿಕಟ ಸಂಬಂಧದ ಬಗ್ಗೆ ಉದಾಹರಿಸಿದ್ದಾನೆ. (ರೋಮಾ. 12:4,5 ಮತ್ತು 1 ಕೊರಿ. 12:12). ತಲೆಯು ದೇಹವನ್ನು ನಿಯಂತ್ರಿಸುವಂತೆ, ಅದರ ಬಗ್ಗೆ ಆಲೋಚಿಸುವಂತೆ, ಅದರ ಬಗ್ಗೆ ಯೋಚನೆ ಮಾಡುವಂತೆ, ಅದರ ಸಂಗತಿಗಳನ್ನು ಮೇಲ್ವಿಚಾರಿಸುವಂತೆ, ಮತ್ತು ಒಂದಲ್ಲಾ ಒಂದು ಅಂಗವನ್ನು ಮತ್ತೊಂದು ಅಂಗಕ್ಕೆ ಸಹಾಯ ಮಾಡಲು ಉಪಯೋಗಿಸುವಂತೆ, ನಿರ್ದೇಶಿಸುವಂತೆ ಕರ್ತನೂ ಸಹಾ ತನ್ನ ಸಭೆಯಲ್ಲಿ ಮೇಲ್ವಿಚಾರಕನಾಗಿದ್ದು, ಸಭೆಯೆಂಬ ದೇಹದ ವಿವಿಧ ಸದಸ್ಯರುಗಳನ್ನು ತನ್ನ ಇಚ್ಛಾನುಸಾರ ವ್ಯವಸ್ಥೆಗೊಳಿಸುವಾಗ ತಮ್ಮ ಕರೆ ಮತ್ತು ಆಯ್ಕೆಯನ್ನು ನಿಶ್ಚಯಪಡಿಸುವವರ ಆಸಕ್ತಿಯನ್ನು ತಳ್ಳಿಹಾಕಬಹುದಾಗಿದೆ. ಆದರೆ, ಅವರುಗಳು ತಮ್ಮ ಹೃದಯದ ಮನೋವೃತ್ತಿಯಲ್ಲಿ ದೀನರೂ, ಪ್ರಾಮಾಣಿಕರೂ ಆಗಿದ್ದಲ್ಲಿ "ಎಲ್ಲಾ ಕಾರ್ಯಗಳೂ ಅನುಕೂಲವಾಗಿ ಅವರ ಒಳಿತಿಗಾಗಿಯೇ ನೆರವೇರುವುವು", ಯಾಕೆಂದರೆ ಅವರುಗಳು "ದೇವರನ್ನು ಪ್ರೀತಿಸುವವರಾಗಿದ್ದು ಆತನ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿಯೇ ಕರೆಯಲ್ಪಟ್ಟಿದ್ದಾರೆ".

ಕ್ರಿಸ್ತನು ಮತ್ತು ಆತನ ಸಭೆಯ ಚಿತ್ರಣವನ್ನು ಕೊಡುವ ಮತ್ತೊಂದು ಉದಾಹರಣೆಯೆಂದರೆ ಸೇನಾಪತಿ ಮತ್ತು ಆತನ ಸಿಪಾಯಿಗಳು; ಮತ್ತೊಂದೆಡೆ ಕುರುಬ ಮತ್ತು ಆತನ ಕುರಿಗಳು. ಈ ಎಲ್ಲಾ ಚಿತ್ರಣಗಳೂ ನಮಗೆ ನೂತನ ಸೃಷ್ಟಿಯ ಶಿರಸ್ಸಾಗಿರುವಾತನಿಗೂ ಆತನ ಸಹೋದರರಿಗೂ, ಸಭೆಗೂ ಇರುವ ಪ್ರತಿಷ್ಟೆಗೊಂಡ ಸಂಬಂಧವನ್ನು ಹೊರತರುವುದಾದರೂ ಇವುಗಳಲ್ಲಿ ಯಾವುದೂ ಬಹುಶಃ ಮದಲಿಂಗ ಹಾಗೂ ಮದಲಗಿತ್ತಿಯಲ್ಲಿರುವಂತೆ ಯಜಮಾನನ ಸಂಪೂರ್ಣವಾದ ಆಸಕ್ತಿ ಮತ್ತು ಪ್ರೀತಿಯ ಪೂರ್ಣವಾದ ದೃಷ್ಟಿಕೋನವನ್ನು ತೋರಿಸಿಕೊಡಲಾರದು. ನಿಶ್ಚಯವಾಗಿ ಒಬ್ಬನೇ ಮಗನೂ ಓರ್ವ ಕುಲೀನನೂ ಆಗಿರುವ ಮದಲಿಂಗನ ವೈಭವಪೂರಿತ ಗುಣಲಕ್ಷಣಗಳು ಮತ್ತು ನಂಬಿಗಸ್ತತೆಯನ್ನು ಅಧೀನ ಮಾಡಿಕೊಳ್ಳಲು ಅವರ ಕಣ್ಣುಗಳು ತೆರೆಯಲ್ಪಟ್ಟಿವೆ. ಇದನ್ನು ಉತ್ತಮವಾದ ಪ್ರವಾದನೆಯಾಗಿ ಆತನ ಸಭೆಯ, ದೇಹದ ಚಿತ್ತವೃತ್ತಿಯಾಗಿ' ಅವನು ಹತ್ತು ಸಾವಿರಜನರಲ್ಲಿ ಧ್ವಜಪ್ರಾಯನು, ಒಟ್ಟಾರೆಯಾಗಿ ಪ್ರೀತಿಸಲ್ಪಡುವ "ಏಕೈಕನು" ಎಂದು ತಿಳಿಸಲ್ಪಟ್ಟಿದೆ. ಈ ಚಿತ್ರಣವನ್ನು ಉಪಯೋಗಿಸಿಕೊಂಡು ಸಭೆಯನ್ನು ಉದ್ದೇಶಿಸಿ ಮಾತನಾಡುವ ಅಪೋಸ್ತಲನು "ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯಮಾಡಿದೆನಲ್ಲಾ" (2 ಕೊರಿ. 11 :2) ಎಂದು ಪ್ರಕಟಿಸುತ್ತಾನೆ. ಇಂದು ಎಲ್ಲೆಲ್ಲಿಯೂ ಕ್ರೈಸ್ತರಾಜ್ಯದಲ್ಲಿ ಉಪಯೋಗದಲ್ಲಿರುವ ಪದ್ಧತಿಯಿಂದ ಪ್ರತ್ಯೇಕವಾಗಿರುವ ಇಬ್ರಿಯ ವಿವಾಹ ಪದ್ಧತಿಯನ್ನು ಆತನು ಇಲ್ಲಿ ಉಲ್ಲೇಖಿಸಿದ್ದಾನೆ. ಇಂದು ವಿವಾಹ ನಿಶ್ಚಿತಾರ್ಥವು ಕೇವಲ ಒಂದು ಪ್ರಾಯೋಗಿಕ ನಿಶ್ಚಿತಾರ್ಥವಾಗಿದ್ದು, ಯಾವುದಾದರೂ ಒಂದು ಕಡೆಯವರಿಗೆ ಅದು ಅವಿವೇಕತನದ್ದೋ ಅಥವಾ ಲಾಭದಾಯಕವಲ್ಲದ್ದೋ ಎಂದು ಕಂಡು ಬಂದಲ್ಲಿ ಅದನ್ನು ಮುರಿಯಬಹುದು, ಆದರೆ ಕರ್ತನು ಉದ್ದೇಶಿಸಿದ ಇಬ್ರಿಯ ವಿವಾಹ ನಿಶ್ಚಿತಾರ್ಥವು ಸ್ಪಷ್ಟವಾಗಿ ಇಲ್ಲಿ ಮದಲಿಂಗನಾದ ಕ್ರಿಸ್ತ ಮತ್ತು ಆತನ ವಧುವಾದ ಸಭೆ ಇವುಗಳ ನಡುವೆ ನಡೆಯುವುದಾಗಿದೆ. ಯೆಹೂದ್ಯ ಪದ್ಧತಿಯ ಪ್ರಕಾರ ನಿಶ್ಚಿತಾರ್ಥವೇ ನಿಜವಾದ ವಿವಾಹ; ಇದರಲ್ಲಿ ಮದಲಿಂಗ ಮತ್ತು ಮದಲಗಿತ್ತಿಯ ಪ್ರತಿನಿಧಿಗಳು ವರದಕ್ಷಿಣೆ ಮುಂತಾದವುಗಳ ಬಗ್ಗೆ ಒಂದು ಲಿಖಿತ ಒಪ್ಪಂದವನ್ನು ಮಾಡಿಕೊಳ್ಳುವವರಾಗಿದ್ದು, ಈ ಸಂಗತಿಯು ಮುಂದಿನ ದಿನಗಳಲ್ಲಿ ಪಾಲಿಸಲೇಬೇಕಾಗುತ್ತದೆ. ನಿಜವಾದ ವಿವಾಹ ಮತ್ತು ಮದುಮಕ್ಕಳ ಒಂದುಗೂಡುವಿಕೆಯನ್ನು ಸುಮಾರಾಗಿ ಒಂದು ವರ್ಷದವರೆಗೂ ಸಾಮಾನ್ಯವಾಗಿ ಮುಂದೂಡಬಹುದು. ಪರಲೋಕದ ಮದಲಿಂಗನಾದ ನಮ್ಮ ಕರ್ತನ ಮತ್ತು ಆತನೊಡನೆ ನಿಶ್ಚಿತಾರ್ಥಮಾಡಿ ಒಪ್ಪಿಕೊಂಡವರ ನಡುವೆಯೂ ಇದೇ ರೀತಿಯ ಒಪ್ಪಂದವಾಗಬೇಕಾಗಿದೆ. ಆತನ ಮೂಲಕವಾಗಲೀ, ನಮ್ಮ ಮೂಲಕವಾಗಲೀ ಈ ಒಡಂಬಡಿಕೆಯನ್ನು ಉದಾಸೀನ ಮಾಡಲಾಗದು. ಆದರೆ ಹೃದಯದ ಸಕಾರಾತ್ಮಕ ಅನ್ಯೋನ್ಯತೆ, ಆಸಕ್ತಿ, ಪ್ರೇಮ, ಹಾಗೂ ನಿಷ್ಠೆಯು ಕಂಡುಬರಬೇಕು. ನಮ್ಮ ಈ ಒಡಂಬಡಿಕೆಯ ರದ್ದುಪಡಿಸುವಿಕೆಯು ಮದಲಿಂಗನ ಬಗ್ಗೆ ಗಂಭೀರ ಸ್ವರೂಪದ್ದು. ಆದುದರಿಂದ ಅಪೋಸ್ತಲನು ನಮಗೆ ನಿಶ್ಚಯ ಪಡಿಸುವುದೇನೆಂದರೆ "ನಿಮ್ಮನ್ನು ಕರೆಯುವವನು ನಂಬಿಗಸ್ತನು, ಆತನು ತನ್ನ ಕಾರ್ಯವನ್ನು ಸಾಧಿಸುವನು" (1 ಥೆಸ. 5:24). ಈ ಕಾರಣದಿಂದ ಸಂಗತಿಯ ಎಲ್ಲಾ ಒತ್ತಡವು ನಮ್ಮ ಮೇಲೆ ಅದೆ.

ಯುಗಾಂತ್ಯದಲ್ಲಿ ನಮ್ಮ ಕರ್ತನು ಮದಲಗಿತ್ತಿಯನ್ನು ಅಂಗೀಕರಿಸಲು ಮದಲಿಂಗನೋಪಾದಿಯಲ್ಲಿ ಬರುವನು. ಆದರೆ, ಆತನು ಕೇವಲ "ಬುದ್ಧಿವಂತ ಕನ್ಯೆ"ಯರನ್ನು ಮಾತ್ರವೇ ಸ್ವೀಕರಿಸುತ್ತಾನೆ. ಒಡಂಬಡಿಕೆಯನ್ನು ಮಾಡಿಕೊಂಡ ಮೇಲೆ ಆಲಸ್ಯವಾಗಿ ನಡಕೊಂಡವರನ್ನು ಅಂಗೀಕಾರಕ್ಕೆ ಯೋಗ್ಯರೆಂದು ಪರಿಗಣಿಸುವುದಿಲ್ಲ ; ವಿವಾಹದ ಸಂಬಂಧದಲ್ಲಿಯೂ ಅವರು ಅರಿಯದವರಾಗುತ್ತಾರೆ; ಸಾಮ್ಯದಲ್ಲಿ ಹೇಳಿದಂತೆ ಅವರಿಗೆ ಕದವನ್ನು ಮುಚ್ಚಲಾಗುವುದು (ಮತ್ತಾಯ 25:1–12); ಅವರು ಪ್ರಾಮಾಣಿಕರಾಗಿದ್ದಲ್ಲಿ ಅನುಭವಿಸಬಹುದಾಗಿದ್ದ ಎಲ್ಲಾ ಮಹಾ ಸವಲತ್ತುಗಳೂ, ಆಶೀರ್ವಾದಗಳೂ ಅವರ ಪಾಲಿಗೆ ಮುಚ್ಚಲ್ಪಡುವುದು. ಆದರೆ ಅವರ ಅಪ್ರಮಾಣಿಕತೆಯು ಅವರಿಗೆ

ಸಂಕಷ್ಟ ಸಮಯವನ್ನು ತರುವುದಾದರೂ. ಅವರು ದೇವರ ರಾಜ್ಯ ಮತ್ತು ಆತನ ಸ್ವಭಾವದಲ್ಲಿ ಪಾಲುದಾರಿಕೆಯನ್ನು ಕಳಕೊಳ್ಳುವವರಾದರೂ, ಈ ಕಾರಣದಿಂದ ಅವರುಗಳು ನಿತ್ಯಪೀಡನೆಗೆ ಒಳಗಾಗುವರು ಎಂಬ ಅರ್ಥವಲ್ಲವೆಂಬುದಕ್ಕಾಗಿ ನಾವು ಸಂತೋಷಪಡಬಹುದಾಗಿದೆ. ದೇವರ ವಾಕ್ಯದ ಬೆಳಕು ಈಗ ಮತ್ತಷ್ಟು ಪ್ರಕಾಶಮಯವಾಗಿ ಹೊಳೆಯುತ್ತಿರುವುದಕ್ಕಾಗಿ ಆತನಿಗೆ ಸ್ತೋತ್ರ!. "ನಮ್ಮ ಕರೆ ಮತ್ತು ಆಯ್ಕೆಯ ತಯಾರಿಕೆ ನಿಶ್ಚಯ"ವೆಂದರೆ ಅದನ್ನು ನಮ್ಮಲ್ಲಿ ಹೊಂದುವವರಿಗೆ ಕೃಪೆಯ ಮಹಾ ಮತ್ತು ನಿತ್ಯವಾದ ಸಂಪತ್ತು ದೊರೆಯುತ್ತದೆ. ಒಡಂಬಡಿಕೆಗೆ ಆಲಸ್ಯ ತೋರಿಸುವುದರ ಮೂಲಕ ಅದನ್ನು ಕಳಕೊಳ್ಳುವುದು ಸಹ ಸಣ್ಣ ಶಿಕ್ಷೆ ಏನಲ್ಲ, ಇದರಿಂದ ಈ ಪ್ರಪಂಚ ಮತ್ತು ಇದರ ಸೆಳೆತದಲ್ಲಿಯೇ ಭ್ರಷ್ಟರಾಗಬೇಕಾಗುತ್ತದೆ.

"ಯೇಸುಕ್ರಿಸ್ತನಲ್ಲಿ ನೂತನ ಸೃಷ್ಟಿ"ಯ ಹೆಚ್ಚಿನ ಭಾಗವನ್ನು ಮೇಲ್ವರ್ಗದಿಂದಲ್ಲದೆ ಈ ಸಮಾಜದ ಕೆಳವರ್ಗದಿಂದ ಆರಿಸಿಕೊಂಡಿದ್ದರೂ, ಈ ಕಾರಣದಿಂದ ಲೋಕವು ಆತನನ್ನು ಅರಿಯದ ರೀತಿಯಲ್ಲಿ ನಮ್ಮನ್ನು ಸಹಾ ಅರಿತುಕೊಳ್ಳದೇ ಹೋದಾಗ್ಯೂ, ದೇವರು ಹೊರಗಣ ತೋರಿಕೆಗಳನ್ನು ನೋಡದೇ, ನಮ್ಮ ಹೃದಯಗಳನ್ನೇ ನೋಡುವವನಾಗಿದ್ದಾನೆ, ಮಾತ್ರವಲ್ಲದೆ ಈಗ ತಾನೇ ನೂತನ ಸೃಷ್ಟಿಗಳಾಗಲು ಸಿದ್ಧರಾಗಿರುವ ಈ ವರ್ಗದ ಪ್ರಾಮಾಣಿಕರನ್ನು ಬಹಳ ಹೆಚ್ಚಾಗಿ ಮೆಚ್ಚಿಕೊಳ್ಳುತ್ತಾನೆ ಎಂಬುದಾಗಿ ದೇವರ ವಾಕ್ಯವು ನಮಗೆ ಭರವಸೆ ನೀಡುತ್ತದೆ. ಅವರ ವಿಷಯದಲ್ಲಿ ದೈವಿಕ ಮೇಲ್ವಿಚಾರಣೆಯ ಬಗ್ಗೆ ಹಾಗೂ ಅವರ ಅಂತಿಮ ಒಳಿತಿಗಾಗಿ ಎಲ್ಲಾ ಸಂಗತಿಗಳೂ ಒಟ್ಟಾಗಿ ಕೆಲಸ ಮಾಡುತ್ತವೆಂದು ಆತನು ಹೇಳುವುದು ಮಾತ್ರವಲ್ಲ, ಈ ಮೇಲ್ವಿಚಾರಣೆಯು ಯಾವ ರೀತಿಯಲ್ಲಿ ನೆರವೇರುತ್ತದೆ – ರಕ್ಷಣೆಯ ವಾರಸುದಾರರನ್ನು ಉಪಚರಿಸಲು ದೇವದೂತರುಗಳನ್ನು ಕಳುಹಿಸಲಾಗುತ್ತದೆ, ಕರ್ತನ ದೂತನು ಅವರ ಸುತ್ತಲೂ ದಂಡಿಳಿಸಿ ಕಾವಲಾಗಿದ್ದು ಕಾಪಾಡುತ್ತಾನೆ. ಈ ಚಿಕ್ಕ ಹಿಂಡಿನ ಪೋಷಕರಾದ ದೇವದೂತರುಗಳು ಸದಾ ಅವರ ತಂದೆಯಾದ ದೇವರ ಮುಖದರ್ಶನ ಮಾಡಬಲ್ಲವರಾಗಿದ್ದು, ಸಾಂಕೇತಿಕವಾಗಿ ಆತನೊಂದಿಗೆ ಮಾತನಾಡಬಲ್ಲವರಾಗಿದ್ದು, ತಂದೆಯ ಅನುಮತಿಯಿಲ್ಲದೇ ಅವರ ಒಂದೇ ಒಂದು ತಲೆಗೂದಲೂ ಉದುರಿಹೋಗದು ಎಂಬವುಗಳನ್ನು ಆತನು ಸ್ವಲ್ಪಮಟ್ಟಿಗೆ ತಿಳಿಸುವವನಾಗಿದ್ದಾನೆ. ದೈವಪಾಲನಾ ನೀಡುವಿಕೆಯ ಭರವಸೆಗಳಿಂದೊಡಗೂಡಿದ ಈ ಎಲ್ಲಾ ಹೊಂದಿಕೆಗಳ ಪೂರ್ಣಾನುಸಾರದಲ್ಲಿ ತನ್ನವರು ಯಾರೆಂಬುದನ್ನು ಕರ್ತನು ತಿಳಿದಿದ್ದಾನೆ"(2 ತಿಮೋಥೆ 2:19) "ನಾನು ಕಾರ್ಯಸಾಧಿಸುವ ದಿನದಲ್ಲಿ ಅವರು ನನಗೆ ಸ್ವಕೀಯ ಜನರಾಗಿರುವರು" (ಮಲಾಕಿ 3:17)ಎಂಬಿತ್ಯಾದಿ ದೈವಪ್ರೇರಿತ ವಾಕ್ಯಗಳು ನಮಗೆ ಕೊಡಲ್ಪಟ್ಟಿವೆ.

ನೂತನ ಸೃಷ್ಟಿಯನ್ನು ಪರಿಗಣಿಸುವುದು ನಮಗೆ ಅನುರೂಪವಾಗಿದೆ. ಯಾಕೆಂದರೆ, ಇಲ್ಲಿ ನೂತನ ಜೀವನಕ್ಕೆ ಸಂಬಂಧಿಸಿದ "ನೀವು ಹೊಸದಾಗಿ ಹುಟ್ಟಬೇಕು" ಎಂಬ ಅದರ ಕರೆಯು ಕರ್ತನಿಂದ ಸೂಚಿತವಾಗಿದೆ. ಇಲ್ಲಿ ಈ ಲೋಕದ ಜೀವಿಗಳಾಗಿ ಮಾನವ ಸ್ವಭಾವದಲ್ಲಿ ಸಹಜ ಹುಟ್ಟುವಿಕೆಯು ನೂತನ ಸೃಷ್ಟಿಯ ನೂತನ ಹುಟ್ಟಿನ ಭಾವನೆಗಳ ಕಡೆಗೆ ನಮ್ಮ ಮನಸ್ಸನ್ನು ಸಾಗಿಸುತ್ತದೆ. ಸ್ವಾಭಾವಿಕ ಹುಟ್ಟುವಿಕೆಯ ಮುನ್ನ ಗರ್ಭಧಾರಣೆ, ಜೀವತುಂಬುವಿಕೆ, ಕಡೆಯಲ್ಲಿ ಜನನ. ಅದರಂತೆ ನೂತನ ಸೃಷ್ಟಿಯ ವ್ಯವಸ್ಥೆಯಲ್ಲಿಯೂ ಸಹಾ – (i) ನಾವು ವಾಕ್ಯ ಮತ್ತು ಆತ್ಮನಿಂದ ಅಂಕುರವಾಗಬೇಕು (ii) ನಾವು ಹೊಂದಿದ ಸತ್ಯದ ಆತ್ಮನಿಂದ ಚೈತನ್ಯಹೊಂದಿ ವೃದ್ಧಿಗೊಳ್ಳಬೇಕು ಮತ್ತು (iii) ಈ ಅಭಿವೃದ್ಧಿ ಪ್ರಕ್ರಿಯೆಯು ಮುಂದುವರೆದಲ್ಲಿ, ದೇವರ ವಾಕ್ಯವು ನಮ್ಮಲ್ಲಿ ಸಮೃದ್ಧಿಯಾಗಿ ನೆಲೆಗೊಂಡಲ್ಲಿ ಅದು ನಮ್ಮನ್ನು ಆಲಸ್ಯಗಾರನ್ನಾಗಲೀ ಅಥವಾ ನಿಷ್ಫಲರನ್ನಾಗಲೀ ಮಾಡದೆ ನಾವು ಹತ್ತಿರ ಹತ್ತಿರವಾಗಿ ಜನನಕ್ಕೆ ಬಂದು ಕ್ರಿಸ್ತನ ದೇಹದ ಅಂಗಗಳಾಗಿ ಪ್ರಥಮ ಪುನರುತ್ಥಾನದಲ್ಲಿ ಪಾಲುಗಾರರಾಗುತ್ತೇವೆ. ಪುನರುತ್ಥಾನ ಮತ್ತು ಸ್ವಾಭಾವಿಕವಾದ, ಲೌಕಿಕ ಮಾನವ ಜೀವಿತದಿಂದ ದೈವ ಸ್ವಭಾವ ಹೊಂದಿದ ಪರಲೋಕದ ಜೀವಿಗಳಾಗಿ ಪೂರ್ಣವಾದ ಬದಲಾವಣೆಹೊಂದುವುದನ್ನು ಕುರಿತು ನಾವು ಹೇಳುವುದು ಬಹಳವಿದೆ (6ನೇ ಅಧ್ಯಾಯ ನೋಡಿರಿ). ಆದರೆ ನಾವಿಲ್ಲಿ ಹುಟ್ಟೋಣದ (Begetting) ಬಗ್ಗೆ ವಿಶಿಷ್ಟವಾಗಿ ಲಕ್ಷಿಸುವವರಾಗಿದ್ದೇವೆ. ಈ ಪದವು ಸ್ಪಷ್ಟವಾಗಿ ದೇವರ ಮಕ್ಕಳಾಗಿ ಹುಟ್ಟುವುದನ್ನು ಸೂಚಿಸುತ್ತದೆ. ಇವರು "ರಕ್ತ ಸಂಬಂಧದಿಂದಾಗಲೀ, ಕಾಮದಿಂದಾಗಲೀ, ಪುರುಷ ಸಂಕಲ್ಪ ದಿಂದಾಗಲೀ ಹುಟ್ಟುವವರಲ್ಲ ದೇವರಿಂದಲೇ ಹುಟ್ಟಿದವರು". (ಯೋಹಾನ 1:13) ಅಪೋಸ್ತಲನಾದ ಪೌಲನು ಸಹಾ ಆಯ್ದುಕೊಂಡ ನೂತನ ಸೃಷ್ಟಿ, ಮತ್ತು ಅವರ ಶಿರಸ್ಸಾದ ಕ್ರಿಸ್ತ, ಮತ್ತು ಅವರು ಕರೆಯಲ್ಪಟ್ಟ ಗೌರವಯುತ ಸ್ಥಿತಿ ಇವುಗಳನ್ನು ಉದ್ದೇಶಿಸಿ "ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ; ಆರೋನನು ಸಹಾ ದೇವರಿಂದಲೇ ನೇಮಿಸಲ್ಪಟ್ಟು ಆ ಗೌರವವನ್ನು ವಹಿಸಿಕೊಂಡನಲ್ಲಾ " (ಇಬ್ರಿಯ 5 : 4) ಎಂದು ಬರೆಯುತ್ತಾನೆ.

ಈ ಆಯ್ದುಕೊಂಡ "ನೂತನ ಸೃಷ್ಟಿ" ಮತ್ತು ಸ್ವಾಭಾವಿಕ ಮಾನವ ಕುಟುಂಬಕ್ಕೂ ಇರುವ ವ್ಯತ್ಯಾಸವನ್ನು ದೇವರ ವಾಕ್ಯವು ನಿರಂತರವಾಗಿಯೂ ಮತ್ತು ಸ್ಪಷ್ಟವಾಗಿಯೂ ತಿಳಿಸುತ್ತದೆ; ಆದರೆ ಇಲ್ಲಿ ನಾವು ಸಂಕ್ಷಿಪ್ತವಾಗಿ ಎರಡು ನಿದರ್ಶನಗಳನ್ನು ನೀಡಬಹುದು, (1) ಲೋಕದ ವಿಮೋಚನೆಯನ್ನು ಕುರಿತಾಗಿ ಮಾತನಾಡುವಾಗ ಅಪೋಸ್ತಲನು ಸ್ಪಷ್ಟವಾಗಿ ಪ್ರಾಯಶ್ಚಿತ್ತ ಯಜ್ಞವನ್ನು ಎರಡು ಭಾಗಗಳನ್ನಾಗಿ ಮಾಡುತ್ತಾನೆ, ಮೊದಲನೆಯದು ಸಭೆಗಾಗಿ, ಮತ್ತೊಂದು ಲೋಕಕ್ಕಾಗಿ. ಆತನು ಹೀಗೆ ಬರೆಯುತ್ತಾನೆ – "ಆತನು ನಮ್ಮ (ಸಭೆಯ) ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹಾ ನಿವಾರಣೆ ಮಾಡುತ್ತಾನೆ" (1 ಯೋಹಾನ 2:2). (2)ಇದೇ ಅಪೋಸ್ತಲನು ಪ್ರಸ್ತುತ ಜೀವನದಲ್ಲಿ ಸಭೆಯ ಮತ್ತು ಇಹಲೋಕದ ಪರೀಕ್ಷೆ ಹಾಗೂ ಸಂಕಟಗಳನ್ನು ಪ್ರತ್ಯೇಕಿಸುತ್ತಾನೆ. ಮತ್ತು ಆಯ್ದ ಸಭೆಯ ಮತ್ತು ಇಹಲೋಕದ ನಿರೀಕ್ಷೆಗಳ ಬಗ್ಗೆಯೂ ಸಹಾ ಹೀಗೇ ಮಾತಾಡುತ್ತಾನೆ. ಆತನು ಹೇಳುವುದೇನೆಂದರೆ, "ಪ್ರಥಮಫಲವಾಗಿರುವ ಪವಿತ್ರಾತ್ಮವರವನ್ನು ಹೊಂದಿದ ನಾವಾದರೂ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರು ನೋಡುತ್ತಾ ನಮ್ಮೊಳಗೆ ನರಳುತ್ತೇವೆ" (ರೋಮಾ. 8:23) ದೇಹ ಅಂದರೆ

ಒಂದೇ ದೇಹವಾಗಿರುವ ಸಭೆ, ಇದಕ್ಕೆ ಕ್ರಿಸ್ತನೇ ಶಿರಸ್ಸು. ಇದರ ವಿಮೋಚನೆಯು ಆತನ ಎರಡನೇ ಬರುವಿಕೆಯಲ್ಲಿ ಪ್ರಥಮ ಪುನರುತ್ಥಾನದಲ್ಲಿ ಆಗುವುದೆಂದು ವಾಗ್ದಾನ ಮಾಡಲಾಗಿತ್ತು. ಈ ಲೋಕದವರಂತೆ ನಾವು ಬಾಹ್ಯವಾಗಿ ನರಳುವವರಲ್ಲ. ಯಾಕೆಂದರೆ ನಾವು ಆತನ ಪವಿತ್ರಾತ್ಮನ ಮೂಲಕ ಉತ್ಪನ್ನಗೊಂಡಾಗ ಪ್ರಸ್ತುತ ಸಮಯದ ನಿರಾಶೆ, ಶೋಧನೆ ಮತ್ತು ಸಂಕಟಗಳಿಗಾಗಿ ಪ್ರತಿರೋಧಕವನ್ನು ಪಡೆದವರಾಗಿದ್ದೇವೆ. ನಮ್ಮ ಆತ್ಮಗಳಿಗೆ ಲಂಗರಿನಂತಿರುವ ಮಹಿಮೆಯುಳ್ಳ ನಿರೀಕ್ಷೆ ಮತ್ತು ವಾಗ್ದಾನಗಳು ಸಹಾ ಪರದೆಯೊಳಗಿರುವ ಅದನ್ನು ಪ್ರವೇಶಿಸುತ್ತವೆ. ನಮ್ಮ ವಿವಿಧ ರೀತಿಯ ಸಂಕಟ ಮತ್ತು ಶೋಧನೆಗಳಲ್ಲಿ ನಾವು ನಿರೀಕ್ಷೆಯಿಲ್ಲದ ಇತರರಂತೆ ದುಃಖಿಸುವವರಲ್ಲ. ಅದೇ ಸಮಯದಲ್ಲಿ ಅಪೋಸ್ತಲನು ಪ್ರಪಂಚ ಮತ್ತು ಅದರ ನಿರೀಕ್ಷೆ ಇವುಗಳನ್ನು ಉಲ್ಲೇಖಿಸುತ್ತಾ "ಜಗತ್ತೆಲ್ಲಾ ಇಂದಿನವರೆಗೂ ನರಳುತ್ತಾ ಪ್ರಸವವೇದನೆ ಪಡುತ್ತಾ ಇರುತ್ತದೆಂದು ನಾವು ಬಲ್ಲೆವು" (ರೋಮಾ. 8:19,22) ಎಂದು ಬರೆಯುತ್ತಾನೆ; ಈ ತೀವ್ರತೆಯನ್ನು ಶಮನಗೊಳಿಸಲು, ನೋವನ್ನು ನಿವಾರಿಸಲು, ಈ ಸಂಕಟ ಕಾಲದ ವೇದನೆಯನ್ನು ಕಡಿಮೆ ಮಾಡಲು ಅದರ ಬಳಿ ಏನೂ ಇಲ್ಲ, ಇದರಿಂದ ಮಿತಿಮೀರಿದ ಪಾಪದ ಪರಿಣಾಮಗಳ ಬಗ್ಗೆ, ಅದು ಮರಣದಲ್ಲಿ ಕೈಬಿಡುವ ಬಗ್ಗೆ ಅವರು ಪಾಠ ಕಲಿಯುತ್ತಾರೆ. ಆದರೆ, ಈ ಲೋಕದ ನಿರೀಕ್ಷೆಯನ್ನು ಮೀರಿ ನಮ್ಮ ಗಮನ ಸೆಳೆಯುತ್ತಾ ಅಪೋಸ್ತಲನು ನಮಗೆ ಹೇಳುವುದೇನೆಂದರೆ, "ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹು ಲವಲವಿಕೆಯಿಂದ ಎದುರು ನೋಡುತ್ತಿರುವುದು" (ರೋಮಾ. 8:19). ದೇವಪುತ್ರರಲ್ಲಿ ಕಂಡು ಬರುವ ನಿರೀಕ್ಷೆಯೊಡನೆ ಅವರು ಎದುರು ನೋಡುತ್ತಿಲ್ಲ, ಆದರೆ ನೂತನ ಸೃಷ್ಟಿಯ ಮಕ್ಕಳು ದೇವರ ವಾಗ್ದಾನಗಳಿಗೆ ಅನುಸಾರವಾಗಿ ಈ ಯುಗ ಸಹಸ್ರವರ್ಷದ (ಮಿಲೇನಿಯಮ್) ರಾಜ್ಯದ ಮಹಿಮೆ ಮತ್ತು ಶಕ್ತಿಯಲ್ಲಿ ತೊಡಗಿಸಿಕೊಂಡಿರುವ ಆಶೀರ್ವಾದಗಳನ್ನು ಈ ಲೋಕಕ್ಕೆ ತರುವರೆಂದು ಅವರು ಕಾಯುತ್ತಿರುವರು.

ನೂತನ ಸೃಷ್ಟಿಯಲ್ಲಿನ ಸದಸ್ಯತ್ವದ ಪರೀಕ್ಷೆಯು ಈ ಲೋಕದ ಯಾವುದೇ ಸಂಸ್ಥೆಯ ಸದಸ್ಯತ್ವ ಪಡೆಯುವುದರಲ್ಲಿ ಇಲ್ಲ. ಆದರೆ, ಕರ್ತನ ಆಧ್ಯಾತ್ಮಿಕ ದೇಹದ ಸದಸ್ಯರಾಗಿ ಆತನಲ್ಲಿ ಐಕ್ಯಗೊಳ್ಳುವುದರಲ್ಲಿ ಇದೆ. ಅಪೋಸ್ತಲನು ಈ ಬಗ್ಗೆ ಹೇಳುವುದೇನೆಂದರೆ–"ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು "(2 ಕೊರಿ. 5:17). ಕ್ರಿಸ್ತನ ದೇಹದ ಸದಸ್ಯನಾಗಿ ಎಣಿಕೆಯಾಗಲೇಬೇಕಾದಲ್ಲಿ, ಹಳೇ ಸಂಗತಿಗಳೂ ಅಂದರೆ ಈ ಲೋಕದ ಸಂಗತಿಗಳಾದ ಆಸೆ, ಆಕಾಂಕ್ಷೆ, ನಿರೀಕ್ಷೆ, ಹೆಮ್ಮೆ, ಒಣಜಂಬ, ಅವಿವೇಕತನ ಮುಂತಾದವುಗಳು ಹೊರಟು ಹೋಗಬೇಕು. ಇದರಿಂದ ನಮ್ಮ ದೈಹಿಕ ಆಕರ್ಷಣೆಗಳಿಗೆ ಸ್ವಲ್ಪಮಟ್ಟಿಗೆ ಧಕ್ಕೆ ಉಂಟಾಗಬಹುದಾದರೂ, ಕರ್ತನು ಈ ಹೊಸ ಮನಸ್ಸಿನ ಪ್ರಗತಿ ಮತ್ತು ಬೆಳವಣಿಗೆಗಳಲ್ಲಿ ಆಸಕ್ತಿಯುಳ್ಳವನಾಗಿದ್ದು, ಈ ನೂತನ ಮನಸ್ಸನ್ನು "ನೂತನ ಸೃಷ್ಟಿ' ಯೆಂದು ಅಂಗೀಕರಿಸಿ ತನ್ನ ಪ್ರತಿಫಲಗಳನ್ನು ಅದಕ್ಕೆ ವಾಗ್ದಾನ ಮಾಡುತ್ತಾನೆ. ಕ್ರಿಸ್ತನಲ್ಲಿ ನೆಲೆಗೊಳ್ಳಲು, ಕೇವಲ ಪ್ರತಿಷ್ಠೆಪಡಿಸಿಕೊಳ್ಳುವುದಕ್ಕಿಂತ ಇನ್ನೂ ಹೆಚ್ಚಾದುದು ಬೇಕಾಗುತ್ತದೆಂದು ದೇವರ ವಾಕ್ಯವು ನಮಗೆ ಸ್ಪಷ್ಟಪಡಿಸುತ್ತದೆ. ಈ ಪ್ರತಿಷ್ಠೆಯು ಬಾಗಿಲನ್ನು ತೆರೆದು ನಮಗೆ ಆಸರೆಯನ್ನು, ಸಂಬಂಧವನ್ನು, ಸಹಾಯವನ್ನು ಮತ್ತು ದೇವರ ವಾಗ್ದಾನಗಳ ಪ್ರೋತ್ಸಾಹವನ್ನು ಒದಗಿಸಿಕೊಡುತ್ತದೆ. ಅದು ನಮಗೆ ಸರಿಯಾದ ಮಾರ್ಗವನ್ನು ತೋರಿಸುವುದರಿಂದ, ನಾವು ಆತ್ಮನ ವಿವಿಧ ಫಲಗಳನ್ನು ಬೆಳೆಸಿಕೊಳ್ಳಬೇಕು ಮತ್ತು ಕಡೆಯಲ್ಲಿ ಪರಲೋಕದ ಮಹಿಮೆಯಲ್ಲಿ ಕರ್ತನೊಂದಿಗೆ ಜೊತೆ ವಾರಸುದಾರರಾಗಬೇಕು. ಆದರೆ, ಈ ಆಸರೆಯನ್ನು ಕ್ರಿಸ್ತನ ದೇಹದಲ್ಲಿ ಕಾಪಾಡಿಕೊಳ್ಳಲು ಫಲಗಳನ್ನು ಉತ್ಪಾದಿಸುವುದು, ಪ್ರೀತಿ ಹಾಗೂ ನಿಷ್ಠೆ ಇವುಗಳು ಈಗ ಅಗತ್ಯವಾಗಿದೆ. ಒಡೆಯನು ಕೂಡ ದ್ರಾಕ್ಷೆಬಳ್ಳಿಯ ಸಾಮ್ಯದಲ್ಲಿ ಈ ಬಗ್ಗೆ "ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ, ಫಲಕೊಡುವ ಪ್ರತಿಯೊಂದು ಕೊಂಬೆಯೂ ಹೆಚ್ಚು ಫಲ ಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ". (ಯೋಹಾನ 15:2) ಎಂದು ಹೇಳಿದ್ದಾನೆ. ಕೆಲವು ವರ್ಷಗಳ ಹಿಂದೆ ಕರ್ತನಿಂದ ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿ ಅಂಗೀಕರಿಸಲ್ಪಟ್ಟಿರುವವರು ಹೆಚ್ಚು ಕಡಿಮೆ ಆತ್ಮನ ಕೃಪೆ, ಜ್ಞಾನ ಮತ್ತು ಆತ್ಮನಫಲಗಳಿಂದ ತಮ್ಮ ನಿಯಮಿತವಾದ ಬೆಳವಣಿಗೆಯಾಗಿದೆ ಎಂಬ ಅಭಿಪ್ರಾಯವನ್ನು ಉಂಟು ಮಾಡುತ್ತದೆ; ಇಲ್ಲವಾದಲ್ಲಿ ಆತನೊಡನೆ ನಮಗಿರುವ ಸಂಬಂಧವು ಕಳಚಿಹೋಗುತ್ತದೆ ಮತ್ತು ಅಯೋಗ್ಯಗೊಂಡವರಲ್ಲಿ ಮತ್ತೊಬ್ಬರು ನಮ್ಮ ಸ್ಥಳವನ್ನು ಆಕ್ರಮಿಸುತ್ತಾರೆ, ಮತ್ತು ಮೂಲದಲ್ಲಿ ನಮಗಾಗಿ ಸಿದ್ಧಪಡಿಸಿದ್ದ ಕಿರೀಟವು ಆತನನ್ನು ಪ್ರೀತಿಸುವವರಿಗೆ ದೇವರು ವಾಗ್ದಾನ ಮಾಡಿರುವ ಮಹಿಮೆಯುಳ್ಳ ಸಂಗತಿಯು ಹೆಚ್ಚು ಶ್ರದ್ಧೆಯುಳ್ಳ ಮತ್ತೊಬ್ಬ ಮೆಚ್ಚಿಗೆಗೆ ಪಾತ್ರನಾದ ಭಾಗ್ಯಶಾಲಿಯ ಪಾಲಾಗುತ್ತದೆ. ಅವರು ಕ್ರಿಸ್ತನನ್ನು ಗೆಲ್ಲಬಹುದು –ಲೌಕಿಕವಿಷಯಗಳನ್ನು ಕಸವೆಂದೆಣಿಸಿ ನಷ್ಟಪಟ್ಟು ಕ್ರಿಸ್ತನಲ್ಲಿ ಆಸಕ್ತಿ ವ್ಯಕ್ತಗೊಳಿಸಿ ಆಯಲ್ಪಟ್ಟವರ ಗುಂಪಿನಲ್ಲಿ ಸ್ಥಾನ ಗಿಟ್ಟಿಸಿಕೊಂಡವರಾಗಿ ಕ್ರಿಸ್ತನನ್ನು ಮೆಚ್ಚಿಸಬಹುದು. ಫಲಗಳು ಮತ್ತು ಆತ್ಮೀಕ ಸಂಗತಿಗಳಲ್ಲಿ ಅಂತಹ ಬೆಳವಣಿಗೆಯು ಕ್ರಿಸ್ತನಲ್ಲಿ ನೆಲೆಗೊಂಡಿರುವುದನ್ನು ವಿಶದಗೊಳಿಸುವುದಲ್ಲದೆ, ಅಪೋಸ್ತಲನಾದ ಪೇತ್ರನು ಹೇಳುವಂತೆ "ದೇವರು ನಿಮ್ಮನ್ನು ಕರೆದದ್ದನ್ನೂ, ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವುದಕ್ಕೆ ಮತ್ತಷ್ಟು ಪ್ರಯಾಸಪಡಿರಿ, ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವುದಿಲ್ಲ ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು" (2 ಪೇತ್ರ 1:10, 11). ಹೇಗಿದ್ದರೂ, ಅಪೋಸ್ತಲನಾದ ಪೌಲನು ಹೇಳಿರುವಂತೆ ಹೊಸಮನಸ್ಸು, ನೂತನ ಸೃಷ್ಟಿ ಇವುಗಳು ಸಮಗ್ರವಾಗಿ ದೇವರ ಚಿತ್ತಕ್ಕೆ ಹೊಂದಿಕೊಳ್ಳಬೇಕು ಮತ್ತು ಆತನು "ಆ ಹಳೇಸ್ವಭಾವವನ್ನು ಅದರ ಒಲವು ಮತ್ತು ಬಯಕೆಗಳೊಂದಿಗೆ ತೊಡೆದುಹಾಕಲು" ಪ್ರತಿನಿತ್ಯವೂ ಬಯಸಬೇಕು. ನೂತನ ಸೃಷ್ಟಿಯು ಸಾಂಕೇತಿಕವಾಗಿ ನೂತನ ವ್ಯಕ್ತಿಯಂತೆ ನಿರೂಪಿಸಲ್ಪಡುತ್ತಾನೆ – ಕ್ರಿಸ್ತನು ಶಿರಸ್ಸು, ಸಭೆಯು ದೇಹದ ಅಂಗಗಳು – ಇದು ತನ್ನಷ್ಟಕ್ಕೆ ತಾನೇ ಬೆಳೆದು ಯೇಸುಕ್ರಿಸ್ತನಲ್ಲಿ ಪರಿಪೂರ್ಣ ವ್ಯಕ್ತಿಯ ನಿಲುವು ಹೊಂದುವಂತೆ ಅತ್ಮೋನ್ನತಿ

ಪಡೆದುಕೊಳ್ಳಬೇಕು, ಪ್ರತಿ ವ್ಯಕ್ತಿಯೂ ಸಂಪೂರ್ಣನೂ, ಪೂರ್ಣವಾಗಿ ಬೆಳೆದವನೂ ಆಗಬೇಕು – ಸಂಪೂರ್ಣಗೊಳ್ಳುವುದೆಂದರೆ ನಮ್ಮ ಸ್ವಂತ ಬಲದ ಮೇಲಲ್ಲ, ದೇಹದಲ್ಲಿಯಲ್ಲ, ಆದರೆ ನಮ್ಮ ಉದ್ದೇಶರಹಿತ ಕುಂದುಕೊರತೆಗಳಿಗೆ ಪರಿಹಾರ ನೀಡುವ ನಮ್ಮ ಜೀವದ ಶಿರಸ್ಸಾಗಿರುವಾತನಲ್ಲಿ, ಆತನ ನೈತಿಕತೆಯಲ್ಲಿ ಸಂಪೂರ್ಣನಾಗಬೇಕು.

ಮಾನವಕುಲವು ತನ್ನ ಸಂಗತಿಗಳನ್ನು ಕಾಣುವುದು, ಕೇಳುವುದು, ಸ್ಪರ್ಷ, ವಾಸನೆ ಮತ್ತು ರುಚಿ ಎಂಬ ಐದು ಜ್ಞಾನೇಂದ್ರಿಯಗಳಿಂದ ನಿರ್ಣಯಿಸುತ್ತದೆ. ನೂತನ ಸೃಷ್ಟಿಯು ತನ್ನ ನೂತನ ಮನಸ್ಸು ಮಣ್ಣಿನ ಘಟದಲ್ಲಿರುವವರೆಗೆ ಇವುಗಳೆಲ್ಲವನ್ನೂ ಮುಕ್ತವಾಗಿ ಉಪಯೋಗಿಸಬಹುದು. ಆದರೆ ಇವುಗಳು ನೂತನ ಸೃಷ್ಟಿಗೆ ಸಾಕಾಗುವುದಿಲ್ಲ. ಅದಕ್ಕೆ ಮಾನವ ಅಂಗಾಂಗಗಳ ಮೂಲಕ ಕಾಣಲಾಗದ, ಸ್ಪರ್ಷಿಸಲಾಗದ, ರುಚಿಸಲಾಗದ, ಕೇಳಿಸಿಕೊಳ್ಳಲಾಗದ ಅಥವಾ ವಾಸನೆ ತಿಳಿಯಲಾಗದ ಆತ್ಮೀಕ ಸಂಗತಿಗಳನ್ನು ಗ್ರಹಿಸಲು ಬೇರೆಯದೇ ಆದ ಜ್ಞಾನವು ಬೇಕಾಗುತ್ತದೆ. ಈ ಕೊರತೆಯನ್ನು ಕರ್ತನು ಪವಿತ್ರಾತ್ಮನ ಮೂಲಕ ತುಂಬಿಸಿಕೊಡುತ್ತಾನೆ. ಅಪೋಸ್ತಲನು ಈ ರೀತಿಯಾಗಿ ಇದನ್ನು ವಿವರಿಸುತ್ತಾನೆ "ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ (ನೂತನ ಸೃಷ್ಟಿಗೆ) ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು... ಅವು ಆತ್ಮ ವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು" (1 ಕೊರಿ. 2 : 9,10 ಮತ್ತು 14).

ಈ ಆತ್ಮೀಕ ಪರಿಜ್ಞಾನವನ್ನು ನೂತನ ಸೃಷ್ಟಿಗಾಗಿ ಪಡಕೊಂಡವರ "ಆರನೆಯ ಜ್ಞಾನ' (Sixth sense) ಎಂಬುದಾಗಿ ಕರೆಯಬಹುದು; ಅಥವಾ ಅವರುಗಳನ್ನು ಸಂಪೂರ್ಣವಾದ ಆತ್ಮೀಕ ಜ್ಞಾನವುಳ್ಳವರು–ಅವರ ಭೂಲೋಕದ ಜ್ಞಾನಕ್ಕೆ ಅನುರೂಪವಾದ ಐದಕ್ಕಿಂತಲೂ ಹೆಚ್ಚುವರಿ ಜ್ಞಾನವುಳ್ಳವರು ಎಂದು ಪರಿಗಣಿಸಬಹುದು. ಕ್ರಮೇಣವಾಗಿ ತಿಳುವಳಿಕೆ ಎಂಬ ಅವರ ಕಣ್ಣು ಸ್ವಾಭಾವಿಕ ಕಣ್ಣುಗಳಿಗೆ ಕಾಣದ ಸಂಗತಿಗಳಿಗೆ ವಿಶಾಲವಾಗಿ ತೆರೆದುಕೊಳ್ಳುತ್ತದೆ;ವಿಶ್ವಾಸದ ಕೇಳಿಸಿಕೊಳ್ಳುವಿಕೆಯ ಶ್ರೇಣಿಯು ದೇವರ ವಾಕ್ಯದ ಪ್ರತಿಯೊಂದು ಒಳ್ಳೆಯ ವಾಗ್ದಾನಗಳೂ ಬಲಯುತವೂ ಮತ್ತು ಅರ್ಥಗರ್ಭಿತವೂ ಆಗುವವರೆಗೆ ಹೆಚ್ಚುತ್ತಾ ಹೋಗುತ್ತದೆ; ತಕ್ಕ ಸಮಯದಲ್ಲಿ ಅದು ದೇವರ ಮತ್ತು ಆತನ ಅದೃಶ್ಯವಾದ ಶಕ್ತಿಯನ್ನು ಸ್ಪರ್ಶಿಸುತ್ತದೆ; ಸ್ವಲ್ಪ ಸ್ವಲ್ಪವಾಗಿ ಅವರು ದೇವರು ಮಹಾ ಕೃಪೆಯುಳ್ಳಾತನೆಂಬುದನ್ನು ಅರಿತು ಸವಿಯುತ್ತಾರೆ. ಕೆಲವು ಸಮಯದ ನಂತರ ಅವರು ಕರ್ತನಿಗೆ ಸುವಾಸನೆಯನ್ನುಂಟು ಮಾಡುವ ಸಮರ್ಪಣೆಗಳನ್ನೂ, ಧೂಪದಿಂದೊಡಗೂಡಿದ ಪ್ರಾರ್ಥನೆಗಳನ್ನೂ ಪ್ರಶಂಸಿಸತೊಡಗುತ್ತಾರೆ. ಆದರೆ ಸ್ವಾಭಾವಿಕ ಜ್ಞಾನವನ್ನು ಬೆಳೆಸುವಂತೆಯೇ ಆತ್ಮೀಕ ಜ್ಞಾನವನ್ನು ಸಹಾ ಬೆಳೆಸಬಹುದು. ಈ ಆತ್ಮೀಕ ಜ್ಞಾನದ ಬೆಳೆಸುವಿಕೆಯು (ಅಥವಾ ಕನಿಷ್ಟ ಅವುಗಳನ್ನು ಬೆಳೆಸುವ ಪ್ರಯತ್ನವು) – ಪುನರುಜ್ಜೀವಿತದ ಜನನಕ್ಕಾಗಿ ನೂತನ ಸೃಷ್ಟಿಯ ಭ್ರೂಣದಂತೆ – ಮಹಿಮೆ, ಗೌರವ ಮತ್ತು ನಿರ್ಲಯತ್ವಗಳೆಂಬ ದೈವಿಕ ಸ್ವಭಾವದ ಪರಿಪೂರ್ಣತೆಗಾಗಿ ಕೃಪೆಯಲ್ಲಿ ನಮ್ಮ ಬೆಳವಣಿಗೆಯನ್ನು ತೋರಿಸುವ ಅಂಶಗಳಾಗಿವೆ.

## ನೂತನ ಸೃಷ್ಟಿಯನ್ನು ಯಾವ ಹೆಸರಿನಿಂದ ಗುರುತಿಸಬೇಕು?

### By What Name Should the New Creation Be Known?

ಒಂದು ದೃಷ್ಟಿಯಲ್ಲಿ ಇದೊಂದು ವಿಚಿತ್ರವಾದ ಪ್ರಶ್ನೆ, ಅಪರೂಪದ ಪ್ರಶ್ನೆ. ಸಭೆಯು ಕರ್ತನಿಂದ ಪರಿಗ್ರಹಿಸಲ್ಪಟ್ಟದ್ದು, ಆತನ ಮದಲಗಿತ್ತಿಯಂತಿದೆ ಎಂದು ನಾವು ಪರಿಗಣಿಸುವಾಗ, ಆಕೆಗೆ ಏನು ಹೆಸರಿರಬೇಕು ಎಂದು ಕೇಳುವುದು ವಿಚಿತ್ರವೆನಿಸುತ್ತದೆ. ಖಂಡಿತವಾಗಿಯೂ ಓರ್ವ ಮದಲಗಿತ್ತಿಗೆ ಆಕೆಯ ಮದಲಿಂಗನ ಹೆಸರಲ್ಲದೆ ಬೇರೆ ಯಾವುದೂ ಸೂಕ್ತವೆನಿಸುವುದಿಲ್ಲ. ಬೇರೆ ಯಾವುದೇ ಹೆಸರನ್ನು ಸೂಚಿಸುವುದು ಕರ್ತನ ಮತ್ತು ಆತನಲ್ಲಿ ಅಭಿಷಕ್ತರಾದವರ, ಆತನ ದೇಹದ ಅಂಗಗಳಾದ, "ಮದಲಗಿತ್ತಿ, ಯಜ್ಞದ ಕುರಿಯಾದಾತನ ಪತ್ನಿ" ಇವರ ನಡುವಣ ಸಂಬಂಧದ ಬಗ್ಗೆ ತಪ್ಪು ಕಲ್ಪನೆ ನೀಡುವ ಅಭಿಪ್ರಾಯವನ್ನುಂಟು ಮಾಡುತ್ತದೆ. ದೇವರ ವಾಕ್ಯದ ಹೆಸರಾದ "Ecclesia" (ಕ್ರೈಸ್ತ ಸಭೆ) ಎಂಬುದು ಬಹಳಷ್ಟು ಸಾಕು. ಹೇಗೆಂದರೆ ಸಭೆಯು ಕ್ರಿಸ್ತನ ದೇಹವಾಗಿದೆ. ಇನ್ನೂ ಹೆಚ್ಚಿನ ವರ್ಣನೆಯ ಅಗತ್ಯವಿದ್ದಲ್ಲಿ ದೇವರ ವಾಕ್ಯವು ಇದನ್ನು "ಕ್ರಿಸ್ತನ ಸಭೆ" ಅಥವಾ "ದೇವರ ಸಭೆ' (ರೋಮಾ. 16 : 16 ಮತ್ತು ಅಪೋ.ಕೃತ್ಯ. 20:28 ಇವುಗಳನ್ನು ನೋಡಿರಿ) ಎಂಬುದಾಗಿ ವ್ಯಕ್ತಪಡಿಸುತ್ತದೆ. ಈ ಎರಡೂ ಹೆಸರುಗಳು ಸಮಾನಾರ್ಥಕವಾದವುಗಳು, ಯಾಕೆಂದರೆ ನಮ್ಮ ಕರ್ತನೂ ಮತ್ತು ದೇವರು ಇವರಿಬ್ಬರಿಗೂ ನಮ್ಮಲ್ಲಿ ಇರುವ ಆಸಕ್ತಿ ಒಂದೇ. ಸಭೆಯು ಕ್ರಿಸ್ತನ ದೇಹವಾಗಿದ್ದು ಆತನೇ ಅದರ ಶಿರವಾಗಿದ್ದಾನೆ. ಅದರಂತೆ ಇಡೀ ಸಭೆ, ಶಿರಸ್ಸು ಮತ್ತು ದೇಹ ಇವುಗಳು ಒಂದು ಸಂಘ ಅಥವಾ ಪಂಗಡವಾಗಿದ್ದು ತಂದೆಯಿಂದ ಅಭಿಷೇಕ ಹೊಂದಿದ್ದು ಇದರ ಮೂಲಕವಾಗಿ ಆತನು ತನ್ನ ವಾಕ್ಯದಲ್ಲಿ ಈಗಾಗಲೇ ಮುಖ್ಯವಾದ ಅಂಶವಾಗಿ ಕಂಡುಬಂದಿರುವ ಹಾಗೂ ವಾಗ್ದಾನ ಮಾಡಲ್ಪಟ್ಟಿರುವ ಲೋಕೋದ್ಧಾರದ ಅದ್ಭುತವಾದ ಮಹಾಕಾರ್ಯವನ್ನು ಆತನು ಪೂರೈಸಲು ಸಂತೋಷಿಸುತ್ತಾನೆ. ಅಪೋಸ್ತಲನು ವಿಶ್ವಾಸಿಗಳನ್ನು "ಜೀವಿಸುವ ದೇವರ ಸಭೆ' ಎಂದು ಕರೆಯುವ ಮೂಲಕ ಆತನು ಕ್ರಿಸ್ತನೇ ಶಿರಸ್ಸಾಗಿರುವ ಸಭೆ ಅಥವಾ ದೇಹ ಅಥವಾ ಜನರನ್ನು ಸತ್ಯದೇವರನ್ನೂ ಸರಿಯಾಗಿ ಗ್ರಹಿಸದ ಮತ್ತು ಸತ್ಯದೇವರಿಂದ ಅಂಗೀಕರಿಸಲ್ಪಡದ ಇತರ ದೇಹಗಳಿಂದ ಅಥವಾ ಧಾರ್ಮಿಕ ಪದ್ಧತಿಗಳಿಂದ ಪ್ರತ್ಯೇಕಿಸಿಯೋ ಎಂಬಂತೆ ಈ ಹೆಸರನ್ನು ಮತ್ತಷ್ಟು ವಿಸ್ತಾರಗೊಳಿಸುವವನಾಗಿದ್ದಾನೆ.

ಕರ್ತನು ಮತ್ತು ಅಪೋಸ್ತಲರುಗಳು ನಮ್ಮ ಮುಂದೆ ನಿಶ್ಚಯಪಡಿಸಿರುವ ಇತರ ಹೆಸರುಗಳ ಬಗೆಗಿನ ಧೋರಣೆಯು ಬಹಳ ಮೊದಲಿನ ಕಾಲದಿಂದಲೂ ಸ್ಪಷ್ಟವಾಗಿದೆ. ಇಂದು ಕೆಲವರು "ನಾನು ಲೂಥರನವನು", "ನಾನು ಕಾಲ್ವಿನ್‌ನವನು",

"ನಾನು ವೆಸ್ಲಿಯವನು", ಅಥವಾ "ನಾನು Knox ನವನು" ಎಂದು ಹೇಳಿಕೊಳ್ಳಲು ಒಲವು ತೋರಿಸಿದರೂ ಸಹಾ, ಪ್ರತಿಯೊಬ್ಬನೂ ತಾನು ಕ್ರಿಸ್ತನವನೆಂದು ಹೇಳಿಕೊಳ್ಳುತ್ತಾರಷ್ಟೆ. ಇದೇ ಪ್ರವೃತ್ತಿಯು ಆದಿ ಸಭೆಯಲ್ಲಿಯೂ ಪ್ರಕಟವಾಗಿತ್ತೆಂದು ನಾವು ನೋಡುತ್ತೇವೆ. ಅಪೊಸ್ತಲನು ಈ ಬಗ್ಗೆ ಕೊರಿಂಥ ಪತ್ರಿಕೆಯಲ್ಲಿ (1 ಕೊರಿ. 3:4–6) ನಮ್ಮ ಗಮನವನ್ನು ಸೆಳೆಯುತ್ತಾನೆ. ಪಕ್ಷ ಅಥವಾ ಪಂಥದ ಭಾವವು ಕೊರಿಂಥದ ಸಹೋದರರಲ್ಲಿ ಹರಡಿತ್ತು. ಕ್ರಿಸ್ತನ ಅಥವಾ ದೇವರ ಹೆಸರಿನಿಂದ ಮಾತ್ರ ತೃಪ್ತರಾಗದ ಅವರು ತಾವು "ಪೌಲನ ಕ್ರೈಸ್ತರು', "ಪೇತ್ರನ ಕ್ರೈಸ್ತರು', "ಅಪೊಲ್ಲೋಸನ ಕ್ರೈಸ್ತರು' ಎಂದು ಕರೆಸಿಕೊಳ್ಳಲು ಬಯಸುತ್ತಿದ್ದರು. ಅಪೋಸ್ತಲನು ದೈವಪ್ರೇರಣೆಯಿಂದ ಈ ಉತ್ಸಾಹವನ್ನು ಆಕ್ಷೇಪಿಸುತ್ತಾನೆ ಮತ್ತು ಇದು ಪವಿತ್ರಾತ್ಮನಿಂದುಂಟಾದುದಲ್ಲ, ಆದರೆ ಇದು ದೇಹವನ್ನು ವಿಭಾಗಿಸಿ ಕರ್ತನ ಸೇವಕರಲ್ಲಿ (ಮುಖ್ಯಸ್ಥನಾದ) ಒಬ್ಬಾತನನ್ನು ಅನುಸರಿಸುವಂತೆ ಮಾಡುವ ವಿಷಯಲಂಪಟತನವಾಗಿದೆ ಎಂದು ಎಚ್ಚರಿಸುತ್ತಾನೆ. ಅಪೊಸ್ತಲನ ಈ ವಾದಸರಣಿಯು ಇಂದಿಗೂ ಅಷ್ಟೇ ಯುಕ್ತವಾಗಿದೆ. "ಕ್ರಿಸ್ತನಿಗೆ ಬೇರೆ ಬೇರೆ ದೇಹಗಳಿವೆಯೋ?, ಕ್ರಿಸ್ತನ ಸಭೆಗಳು ಅನೇಕವಿದೆಯೋ ಅಥವಾ ಒಂದೇ ಸಭೆ ಉಂಟೋ?, ಒಂದೇ ಇರುವುದಾದಲ್ಲಿ ಅದನ್ನು ಬೇರ್ಪಡಿಸುವುದು ಯಾಕೆ? ಹಾಗಾದರೆ ಪೌಲನು ಯಾರು? ಅಪೊಲ್ಲೋಸನು ಯಾರು? ಪೇತ್ರನು ಯಾರು?, ಅವರೆಲ್ಲರೂ ಸಭೆಯ ಶಿರಸ್ಸಾಗಿರುವಾತನ ಸೇವಕರುಗಳು ಮಾತ್ರ. ಅವರುಗಳೆಲ್ಲರನ್ನೂ ಆತನು ತನ್ನ ಪರಿಶುದ್ಧ ದೇಹವಾದ ಸಭೆಯ ಆಶೀರ್ವಾದಕ್ಕಾಗಿಯೇ ಉಪಯೋಗಿಸಿದನು ಎಂಬುದೇ. "ಕ್ರಿಸ್ತನು ವಿಭಾಗವಾಗಿದ್ದಾನೋ?" ಎಂಬುದು ಆತನ ಪ್ರಶ್ನೆಯ ಅರ್ಥ. ಅವರುಗಳು ಸಮ್ಮತಿಸದೇ ಹೋಗಿದ್ದಲ್ಲಿ, ಅವರು ಮಾಡುವ ಕೆಲಸಕ್ಕೆ ಆತನು ಬೇರೆಯವರನ್ನು ಸ್ಥಾಪಿಸುತ್ತಿದ್ದ. ಆದುದರಿಂದ ಅಪೋಸ್ತಲರುಗಳ ಮೂಲಕ ಬಂದಿರುವ ಯಾವುದೇ ಮಹಿಮೆ, ಗೌರವ ಮತ್ತು ಆಶೀರ್ವಾದಗಳು ಸಭೆಯ ಶಿರಸ್ಸಾಗಿರುವಾತನಿಗೇ ಸಲ್ಲಬೇಕು. ಆತನೇ ಈ ಏರ್ಪಾಡುಗಳನ್ನೆಲ್ಲಾ ತನ್ನ ದೇಹದ ಅಗತ್ಯತೆಗಾಗಿ ಒದಗಿಸಿದನು. ಹೀಗೆಂದ ಮಾತ್ರಕ್ಕೆ ದೇವರು ಅಂಗೀಕರಿಸಿದವರನ್ನು ನಾವು ಸರಿಯಾದ ರೀತಿಯಲ್ಲಿ ಗೌರವಿಸಬಾರದು ಎಂಬ ಅರ್ಥವಲ್ಲ. ಆದರೆ ನಾವು ಯಾವುದೇ ರೀತಿಯಲ್ಲಿ ಅವರನ್ನು ಸಭೆಯ ಮುಖ್ಯಸ್ಥರು ಎಂದು ಪರಿಗಣಿಸಿಕೊಂಡು ಸಭೆಯನ್ನು ಅವರ ಹೆಸರಿನಲ್ಲಿ ಗುಂಪುಗಳನ್ನಾಗಿ ಮಾಡಕೂಡದು ಎಂಬ ಅರ್ಥ. ಅಪೋಸ್ತಲರನ್ನಾಗಲೀ ಅಥವಾ ಮತ್ತ್ಯಾವುದೋ ದೇವರ ಸೇವಕರುಗಳನ್ನಾಗಲೀ ದೇವರು ಉಪಯೋಗಿಸಿಕೊಂಡದ್ದು ಸಭೆಯನ್ನು ವಿಭಜಿಸಲಿಕ್ಕಾಗಿ ಅಲ್ಲ, ಆದರೆ ಅದರ ಸದಸ್ಯರನ್ನು ಒಟ್ಟುಗೂಡಿಸಲು, ಮತ್ತು ಅನೇಕ ಪ್ರತಿಷ್ಠಿತ ವಿಶ್ವಾಸಿಗಳನ್ನು ಒಬ್ಬನೇ ಕರ್ತ, ಒಂದೇ ನಂಬಿಕೆ ಮತ್ತು ಒಂದೇ ದೀಕ್ಷಾಸ್ನಾನದ ಮೂಲಕ ಹೆಚ್ಚು ಬಲಯುತವಾಗಿ ಆತನಲ್ಲಿ ಒಂದುಗೂಡಿಸುವ ಸಲುವಾಗಿ.

ಇಂದು ಅಪೋಸ್ತಲನು ನಮ್ಮ ಮಧ್ಯೆ ಶರೀರಧಾರಿಯಾಗಿದ್ದು ಕ್ರೈಸ್ತಸಭೆ ಹಲವಾರು ಗುಂಪುಗಳಾಗಿ ಒಡೆದು ಹೋಗಿರುವುದನ್ನು ನೋಡುತ್ತಿದ್ದರೆ ಆತನ ಭಾಷೆ ಹೇಗಿರುತ್ತಿತ್ತೆಂದು ನಾವು ಆಲೋಚಿಸಬೇಕಾಗುತ್ತದೆ. ಇದು ಹೆಚ್ಚಿನ ಮಟ್ಟದ ವಿಷಯವಾಗಿ ಲೋಲುಪ್ತತೆಯನ್ನು – ಲೌಕಿಕತನವನ್ನು ಇದು ಸೂಚಿಸುವುದಾಗಿದೆ ಎಂದು ಸಂಶಯಾತೀತವಾಗಿ ಆತನು ಹೇಳುತ್ತಿದ್ದ. ಈ ಪದ್ಧತಿಗಳಿಗೆ ಸಂಬಂಧಪಟ್ಟವರೆಲ್ಲರೂ ಪ್ರಾಪಂಚಿಕರು ಮತ್ತು ಸಂಪೂರ್ಣವಾಗಿ ದೇವರಾತ್ಮವಿಲ್ಲದವರು ಎಂಬ ಅರ್ಥವಲ್ಲ. ಎಷ್ಟಾದರೂ ಇದು ಕೆಲವು ಪ್ರಮಾಣದಲ್ಲಿ ನಾವು ದೇವಾರಾತ್ಮನನ್ನು ಹೊಂದಿಕೊಂಡಿರುವಂತೆ, ಕೆಲವು ಪ್ರಮಾಣದಲ್ಲಿ ವಿಷಯ ಸಂಬಂಧವಾದ ಮನಸ್ಸಿನಿಂದ, ಅದರ ನಡೆಸುವಿಕೆ ಮತ್ತು ಪ್ರಭಾವದಿಂದ ಮುಕ್ತವಾಗಿರುವಂತೆ, ಮತ್ತು ಈ ಪ್ರಮಾಣಗಳಲ್ಲಿ ನಮ್ಮ ಸುತ್ತಲೂ ವಿವಿಧ ಪಂಥದ ಹೆಸರಿನಲ್ಲಿ ಇರುವ ವಿಭಾಗಗಳ ಬಗ್ಗೆ ನಾವು ಅನುಕಂಪ ಪಡುತ್ತೇವೆ. ಕೆಲವು ಪ್ರಮಾಣದಲ್ಲಿ ದೇವರ ಪವಿತ್ರಾತ್ಮನು ನಮ್ಮಲ್ಲಿ ಹೆಚ್ಚು ಹೆಚ್ಚಾಗಿ ವೃದ್ಧಿಹೊಂದುತ್ತಾ ತುಂಬಿ ಬರುವಾಗ ನಮಗೆ ಕರ್ತನ ಹೆಸರಲ್ಲದೆ ಬೇರೆ ಯಾವ ಹೆಸರೂ ಅತೃಪ್ತಿಯನ್ನುಂಟು ಮಾಡುತ್ತದೆ, ಕಟ್ಟಕಡೆಯಲ್ಲಿ ನಾವು ಆತ್ಮನ ಮಾರ್ಗದರ್ಶನದಲ್ಲಿ ಕರ್ತನೊಬ್ಬನನ್ನೇ ಅಂಗೀಕರಿಸುವ ಮತ್ತು ಒಂದೇ ಸದಸ್ಯತ್ವವುಳ್ಳ ಸ್ಥಳಕ್ಕೆ ಅಂದರೆ "ಪರಲೋಕದಲ್ಲಿ ಹೆಸರು ಬರೆಯಿಸಿಕೊಂಡಿರುವ ಚೊಚ್ಚಲು ಮಕ್ಕಳಸಭೆ'ಗೆ ಸೇರುತ್ತೇವೆ. ಈ ಸಭೆಗೆ ನೇಮಿತವಾಗುವ ಒಂದೇ ಒಂದು ಪದ್ಧತಿಯೆಂದರೆ ಪವಿತ್ರ ಸಭೆಗೆ ಯಜಮಾನನಾದ ಕರ್ತನ ದೇಹದಲ್ಲಿ ದೀಕ್ಷಾಸ್ನಾನ ಹೊಂದುವುದು. ಆತನ ಮರಣದಲ್ಲಿ ದೀಕ್ಷಾಸ್ನಾನಹೊಂದಿ ಆತನೊಂದಿಗೆ ಮತ್ತು ಒಬ್ಬನೇ ಆತ್ಮನ ಸದಸ್ಯರೆಲ್ಲರೊಂದಿಗೆ ಐಕ್ಯತೆ ಹೊಂದಿಕೊಳ್ಳುವುದು.

ಈ ವಿಷಯದ ಬಗ್ಗೆ ಇರುವ ಕ್ರೈಸ್ತ ಸಾಮ್ರಾಜ್ಯದ ಪೂರ್ಣವಾದ ಚಿತ್ತವೃತ್ತಿಯನ್ನು ಬದಲಾಯಿಸುವುದು ನಮ್ಮದಲ್ಲ – ಅದು ಯಾವುದೇ ಮಾನವಜೀವಿಗೆ ಬಹು ದೊಡ್ಡದಾದ ಕರಾರು ಎನಿಸುತ್ತದೆ. ನಾವು ವೈಯುಕ್ತಿಕವಾಗಿ ಮದಲಿಂಗನಿಗೆ ಪ್ರಾಮಾಣಿಕರಾಗಿರುವುದು – ಕ್ರಿಸ್ತನ ಹೆಸರನ್ನು ಹೇಳಿಕೊಳ್ಳುವ ಪ್ರತಿಯೊಬ್ಬನೂ ಎಲ್ಲಾ ವಿಧವಾದ ದುಷ್ಟತನದಿಂದ, ತನ್ನ ಸ್ವಂತ ವಿಶ್ವಾಸಕ್ಕೆ, ನಡತೆಗೆ ಮತ್ತು ಆಚಾರಪದ್ಧತಿಗಳಿಗೆ ತಪ್ಪೆನಿಸುವ ಎಲ್ಲಾ ಸಂಗತಿಗಳಿಂದ ದೂರವಾಗುವುದು ಇವೇ ಮುಂತಾದವುಗಳು ನಮ್ಮ ಪಾಲಿನವು. ಇಂಥವರು ಮದಲಿಂಗನಲ್ಲದೆ ಬೇರೆ ಯಾವ ಹೆಸರಿನಿಂದಲೂ ತಿಳಿಯಲ್ಪಡಲು ಇಷ್ಟಪಡುವುದಿಲ್ಲ. ಕೇಳಿದಾಗ ಆತನ ಹೆಸರನ್ನು ಭೂಪರಲೋಕಗಳಲ್ಲಿ, ಎಲ್ಲಾ ಮಾನವರೂ ರಕ್ಷಣೆ ಹೊಂದಬಹುದಾದ ಆ ಹೆಸರನ್ನು ಮಾತ್ರವೇ ತಮ್ಮ ಸ್ವಂತವಾಗಿಸಿಕೊಳ್ಳುವಲ್ಲಿ ಸಂತೋಷಪಡುತ್ತಾರೆ. ಈ ಸತ್ಯದ ಚೈತನ್ಯಕ್ಕೆ ವಿಧೇಯತೆಯುಳ್ಳವರಾಗಿ ನಾವು ಕರ್ತನಲ್ಲಿ ಮುಕ್ತರಾಗಿ ನೆಲೆಗೊಳ್ಳುವಂತೆ ಎಲ್ಲಾ ಗುಂಪುಗಳ ಹೆಸರಿನಿಂದ ಹಾಗೂ ಭಿನ್ನವರ್ಗದ ಸಂಸ್ಥೆಗಳಿಂದ ದೂರವಾಗುತ್ತೇವೆ. ನಾವು ದೈವ ಚೈತನ್ಯವುಳ್ಳ ಆದರೆ ಇನ್ನೂ ಪಂಥ ಪದ್ಧತಿಯಲ್ಲಿಯೇ ಸೇರಿಕೊಂಡಿರುವವರನ್ನು ಪರಿತ್ಯಾಗ ಮಾಡಬೇಕೆಂದಲ್ಲ. ಅದಕ್ಕೆ ವ್ಯತಿರಿಕ್ತವಾಗಿ ನಾವು–ನನ್ನ ಪ್ರಜೆಗಳೇ, ಅವಳನ್ನು ಬಿಟ್ಟು ಬನ್ನಿರಿ; ನೀವು ಅವಳ ಪಾಪಗಳಲ್ಲಿ ಪಾಲುಗಾರರು ಆಗಬಾರದು;

ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು (ಪ್ರಕಟನೆ 18:4) ಎಂಬ ನಮ್ಮ ಕರ್ತನ ನುಡಿಯನ್ನು ಗ್ರಹಿಸುವವರಾಗಿದ್ದೇವೆ. ಆತನ ಕೆಲವು ಜನರು ಬಾಬೇಲಿನಲ್ಲಿ ಇದ್ದು ಪಂಥ ಪದ್ಧತಿಯ ಸಂಸ್ಥೆಗಳನ್ನೂ, ಹೆಸರುಗಳನ್ನೂ ಮಾನ್ಯ ಮಾಡುವವರಾಗಿ ತಪ್ಪು ಕಲ್ಪನೆಯಲ್ಲಿ ಬಳಲುವವರಾಗಿದ್ದಾರೆ ಎಂಬ ಅಭಿಪ್ರಾಯವನ್ನು ಇದು ನೀಡುವುದಾಗಿದೆ. ನಮ್ಮ ಬೆಳಕು ಅವರ ಮುಂದೆ ಪ್ರಕಾಶಿಸುವಂತೆ ಮಾಡಿ ಫಲಿತಾಂಶವನ್ನು ಆತನಿಗೇ ಬಿಟ್ಟುಬಿಡುವುದು ನಮ್ಮ ಪಾಲಿನದಾಗಿದೆ.

ಯಾವುದೇ ಮಾನವ ಹೆಸರನ್ನು ತೆಗೆದುಕೊಳ್ಳುವುದನ್ನು ನಾವು ವಿರೋಧಿಸಬೇಕಾಗುತ್ತದೆ ಅಲ್ಲದೆ ನಾವು ಪಂಥದ ಅಥವ ಪಕ್ಷದ ಹೆಸರಾಗಿ ಕೆಲವು ದೇವಜನರನ್ನು ಆತನವರಿಂದ ಬೇರ್ಪಡಿಸುವ ಯಾವುದೇ ಹೆಸರನ್ನು ನಾವು ವಿರೋಧಿಸ ಬೇಕಾಗುತ್ತದೆ. ನಾವು "ಕ್ರೈಸ್ತ ಸಭೆ' ಅಥವಾ "ದೇವರ ಸಭೆ' ಎಂಬ ಪದಗಳ ವಿಶೇಷ ಉಪಯೋಗದಿಂದ ತಪ್ಪಿಸಿಕೊಳ್ಳ ಬೇಕಾಗುತ್ತದೆ. ಯಾಕೆಂದರೆ ಈ ಹೆಸರುಗಳು ಒಂದು ನಿರ್ದಿಷ್ಟವಾದ ಗುಂಪಿನ ವಿಶ್ವಾಸಿಗಳನ್ನು ಮತ್ತು ದೇವ ಜನರ ಅನ್ಯೋನ್ಯತೆಯನ್ನು ಗುರುತಿಸುವುಗಳಾಗಿವೆ. ನಿಜವಾಗಿ ಹೇಳುವುದಾದರೆ, ನಾವು ದೇವರ ವಾಕ್ಯದಲ್ಲಿ ಹೇಳಿರುವ ಎಲ್ಲಾ ಹೆಸರುಗಳನ್ನೂ – ಶಿಷ್ಯರು, ದೇವರ ಸಭೆ, ಕ್ರಿಸ್ತನ ಸಭೆ. ಜೀವಿಸುವ ದೇವರ ಸಭೆ, ಕೊರಿಂಥದ ಸಭೆ, ಅಲ್ಲೇಘೆನಿಯ (Alleghany) ಸಭೆ ಎಂಬವುಗಳನ್ನು ಉಪಯೋಗಿಸುತ್ತೇವೆ ಮತ್ತು ಅವುಗಳಿಗೆ ಉತ್ತರಿಸುತ್ತೇವೆ. ಕೆಲವರು ಇದಕ್ಕಾಗಿ ನಮ್ಮನ್ನು ತಪ್ಪಾಗಿ ತಿಳಿಯುತ್ತಾರೆ ಎಂಬ ಸತ್ಯವನ್ನು ನಾವು ಮರೆಮಾಚುವಂತಿಲ್ಲ ಅಥವಾ ಅವರು ಕ್ರೈಸ್ತರಲ್ಲಿ ಸಾಮಾನ್ಯ ರೂಢಿಯಲ್ಲಿರುವುದಕ್ಕಿಂತ ವಿಲಕ್ಷಣವಾದ ಹೆಸರುಗಳನ್ನು ನಮಗೆ ಅನ್ವಯಿಸಿದರೆ ನಾವು ಅದನ್ನು ಅಪರಾಧ ವೆಂದೆಣಿಸುವುದಿಲ್ಲ. ಉದಾಹರಣೆಗೆ, ಅವರು ನಮ್ಮನ್ನು 'Restitutionalist' ಅಥವಾ 'Dawnists' ಅಥವಾ 'Watch Tower people' ಮುಂತಾಗಿ ಕರೆಯಬಹುದು. ನಾವು ಇವುಗಳಲ್ಲಿ ಯಾವುದೇ ಹೆಸರನ್ನು ನಮಗೆ ಅನ್ವಯಿಸುವಂತೆ ಅಂಗೀಕರಿಸುವುದಿಲ್ಲ. ಹೀಗಿದ್ದಾಗ್ಯೂ ಸಾತ್ವಿಕತ್ವ, ತಾಳ್ಮೆ, ಶಾಂತಿ ಮತ್ತು ಪ್ರೀತಿ ಸ್ವಭಾವಗಳ ಚೈತನ್ಯವುಳ್ಳ ನಾವು ಈ ಹೆಸರುಗಳನ್ನು ಅನ್ವಯಿಸುವುದನ್ನು ಅಪರಾಧವೆಂದೆಣಿಸ ಬಾರದು, ಆದರೆ ಅವರ ಉದ್ದೇಶಗಳು ಕೆಟ್ಟದಲ್ಲ ಅಥವಾ ಕನಿಷ್ಟ ದುಷ್ಟತನವೂ ಅಲ್ಲ ಎಂದು ನಾವು ಔದಾರ್ಯವಾಗಿ ಭಾವಿಸುತ್ತೇವೆ. ನಾವು ಈ ಹೆಸರುಗಳಿಗೆ ಕಾದಾಡುವ ರೀತಿಯಲ್ಲಿ ಅಲ್ಲ, ನಾವುಗಳು ಯಾವುದೇ ಪಂಥ ಅಥವಾ ಗುಂಪಿನ ಹೆಸರಿನಲ್ಲಿ ಗುರುತಿಸಲ್ಪಡಲು ಇಷ್ಟಪಡುವುದಿಲ್ಲ, ಆದರೆ ವಿಶಾಲವಾದ ಮತ್ತು ಸಂಪೂರ್ಣವಾದ ಅರ್ಥದಲ್ಲಿ ನಾವು ಕ್ರೈಸ್ತರು ಎಂಬ ಹೆಸರಿನ ಮೇಲೆ ನಿಂತಿದ್ದೇವೆ ಎಂದು ಅವರು ಗ್ರಹಿಸುವಂತೆ ನಯವಾಗಿ ಉತ್ತರಿಸುವವರಾಗಿದ್ದೇವೆ. ಇದು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲದೆ ನಮಗೆ ಬೇರೆ ಯಾವ ಶಿರವೂ ಇಲ್ಲ ಮತ್ತು ಆತನು ಸಂಘಟಿಸಿದ – ಜೀವಸ್ವರೂಪನಾದ ದೇವರ ಸಭೆ ಎಂಬ ಸಂಸ್ಥೆಯಲ್ಲದೆ ಬೇರೆ ಯಾವ ಸಂಸ್ಥೆಯನ್ನೂ ನಾವು ಅಂಗೀಕರಿಸುವುದಿಲ್ಲವೆಂಬುದನ್ನು ಸೂಚಿಸುತ್ತದೆ. ಇದು ದೇವರ ಪವಿತ್ರ ಸಭೆ, ಎಕ್ಲೆಷಿಯಾ (Ecclesis) ಅಥವಾ ಕ್ರಿಸ್ತನ ದೇಹ. ಇವರ ಹೆಸರುಗಳು ಪರಲೋಕದಲ್ಲಿ ಬರೆಯಲ್ಪಟ್ಟಿದೆ.

* * * * * *

■